Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣಕು

## 13-12-2020



Edit with WPS Office

# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ತ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಸಂಜೆ ವಾಣಿ
11. ಈ ಸಂಜೆ

Edit with WPS Office

ಪ್ರಜಾವಾಣಿ

# ಎಸಿಬಿ ಬಲೆಗೆ ಆರೋಗ್ಯಾಧಿಕಾರಿ

ಬೆಂಗಳೂರು: ನೈಸರ್ಗಿಕ ಆಹಾರ ಉತ್ಪನ್ನ ತಯಾರಿಕೆಗಾಗಿ ಎಣ್ಣೆ ಗಿರಣಿ ಆರಂಭಿಸಲು ಅನುಮತಿ ನೀಡಲು ಲಂಚ ಪಡೆಯುತ್ತಿದ್ದ ಬಿಬಿಎಂಪಿ ಹಿರಿಯ ಆರೋಗ್ಯ ಅಧಿಕಾರಿ ಎಸಿಬಿ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಟಿ. ದಾಸರಹಳ್ಳಿ ವಲಯದ ಆರೋಗ್ಯ ಅಧಿಕಾರಿ ವಿ.ಆರ್. ಪ್ರವೀಣ್‌ಕುಮಾರ್ ಅವರನ್ನು ಬಂಧಿಸಿರುವ ಎಸಿಬಿ ಅಧಿಕಾರಿಗಳು, ಲಂಚವಾಗಿ ಪಡೆದ ₹7 ಸಾವಿರ ವಶಕ್ಕೆ ಪಡೆದಿದ್ದಾರೆ.

Edit with WPS Office

ಪ್ರಜಾವಾಣಿ

# ಯಲಹಂಕ: ಸಮುದಾಯ ಭವನ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಕೋಗಿಲು ಸಮೀಪದ ಶ್ರೀನಿವಾಸಪುರದಲ್ಲಿ ಮುಖ್ಯಮಂತ್ರಿಗಳ ನವನಗರೋತ್ಥಾನ ಯೋಜನೆಯಡಿಯಲ್ಲಿ ನಿರ್ಮಿಸಿರುವ ನೂತನ ಸಮುದಾಯಭವನ ಸೇರಿದಂತೆ ₹2.40 ಕೋಟಿ ವೆಚ್ಚದಲ್ಲಿ ಕೈಗೊಂಡಿದ್ದ ವಿವಿಧ ಮೂಲಸೌಕರ್ಯಗಳನ್ನು ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ಶನಿವಾರ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ‘ಸ್ಥಳೀಯರ ಬೇಡಿಕೆಯಂತೆ ಸುಸಜ್ಜಿತವಾದ ಭವನ ನಿರ್ಮಿಸಲಾಗಿದೆ. ಬಡ ಜನರು ಕಡಿಮೆ ಖರ್ಚಿನಲ್ಲಿ ಕಾರ್ಯಕ್ರಮಗಳನ್ನು ನಡೆಸಲು ಅನುಕೂಲವಾಗಲಿದೆ’ ಎಂದರು.



ಸಮುದಾಯ ಭವನವನ್ನು ಬಿಡಿಎ ಅಧ್ಯಕ್ಷ ಎಸ್‌ಆರ್‌ವಿಶ್ವನಾಥ್ ಉದ್ಘಾಟಿಸಿದರು. ಕೆ.ಎ.ಮುನೀಂದ್ರಕುಮಾರ್ ಇದ್ದರು

‘ಶುದ್ಧ ಕುಡಿಯುವ ನೀರಿನ ಘಟಕ, ಬಸ್ ತಂಗುದಾಣ, ಅಂಗನವಾಡಿ ಹಾಗೂ ರಸ್ತೆಗಳ ಅಭಿವೃದ್ಧಿಗೆ ಸಾರ್ವಜನಿಕರು ಮನವಿ ಮಾಡಿದ್ದಾರೆ. ಇವುಗಳಿಗೂ ಶೀಘ್ರದಲ್ಲೇ ಅನುದಾನ ಮಂಜೂರು ಮಾಡಿಸಲಾಗುವುದು’ ಎಂದು ಭರವಸೆ ನೀಡಿದರು.

‘ಕ್ಷೇತ್ರದ ವಸತಿ ವಂಚಿತರಿಗೆ ಸೂರು ಕಲ್ಪಿಸಲು 10 ಸಾವಿರ ಮನೆಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಬಹುಮಹಡಿ ಕಟ್ಟಡಗಳ ಕಾಮಗಾರಿ ಕೆಲವೆಡೆ ನಡೆಯುತ್ತಿದೆ. ಇನ್ನು ಕೆಲವು ಕಡೆ ಪ್ರಾರಂಭಿಸಬೇಕಿದೆ. ಪ್ರತಿ ಮನೆಗೆ ₹20 ಲಕ್ಷ ವೆಚ್ಚ ಆಗಲಿದೆ’ ಎಂದರು.

ಸ್ಥಳೀಯ ಮುಖಂಡ ಕೆ.ಎ.ಮುನೀಂದ್ರಕುಮಾರ್, ‘ಕೊಳಚೆ ನಿರ್ಮೂಲನಾ ಮಂಡಳಿಯಿಂದ ಈಗಾಗಲೇ ಕೋಗಿಲು ಬಡಾವಣೆ, ಅಗ್ರಹಾರ ಬಡಾವಣೆ ಹಾಗೂ ಕಟ್ಟಿಗೇನಹಳ್ಳಿಗಳಲ್ಲಿ ಬಡವರಿಗೆ ಮನೆಗಳ ನಿರ್ಮಾಣ ಕಾಮಗಾರಿ ಆರಂಭವಾಗಿದೆ. ಶ್ರೀನಿವಾಸಪುರದಲ್ಲಿ ಕೆಲ ಸಮಸ್ಯೆಯಿಂದ ಕಾಮಗಾರಿ ಸ್ಥಗಿತಗೊಂಡಿತ್ತು, ಈಗ ಆ ಕಾರ್ಯಕ್ಕೆ ಚಾಲನೆ ದೊರೆತಿದ್ದು, ಶೀಘ್ರದಲ್ಲೇ 42 ಮನೆ ನಿರ್ಮಾಣಗೊಳ್ಳಲಿವೆ’ ಎಂದರು.

Edit with WPS Office

ಕನ್ನಡಪ್ರಭ

## ಸಣ್ ಸುದ್ದಿ

# ಬಿಬಿಎಂಪಿ ಚುನಾವಣೆ ಮುಂದೂಡಲು ಸುಪ್ರೀಂ ಕದ ತಟ್ಟಿದ ರಾಜ್ಯ ಸರ್ಕಾರ

ನವದೆಹಲಿ: ಡಿಸೆಂಬರ್ ಒಳಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಚುನಾವಣೆ ಘೋಷಿಸುವಂತೆ ರಾಜ್ಯ ಹೈಕೋರ್ಟ್ ನೀಡಿರುವ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆ ಹೋಗಿರುವ ಕರ್ನಾಟಕ ಸರ್ಕಾರ ಚುನಾವಣೆ ಮುಂದೂಡುವಂತೆ ಮನವಿ ಮಾಡಿದೆ. ಇದೀಗ ಬಿಬಿಎಂಪಿ ವಾರ್ಡ್ ಮರು ವಿಂಗಡಣೆಯ ಕೆಲಸ ನಡೆಯುತ್ತಿದ್ದು ಪಾಲಿಕೆಯ ವ್ಯಾಪ್ತಿ ಕೂಡ ಹೆಚ್ಚಾಗಿದೆ. ಹಾಗಾಗಿ ಚುನಾವಣೆ ನಡೆಸಲು ಸಮಯ ಬೇಕಾಗುತ್ತದೆ ಎಂದು ಕರ್ನಾಟಕ ಸರ್ಕಾರ ಸಲ್ಲಿಸಿರುವ ವಿಶೇಷ ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ. ಅವಧಿ ಮುಗಿದಿರುವ ಬಿಬಿಎಂಪಿಗೆ ಶೀಘ್ರ ಚುನಾವಣೆ ನಡೆಸುವಂತೆ ಕೋರಿ ಕಾಂಗ್ರೆಸ್ ಮಾಜಿ ಪಾಲಿಕೆ ಸದಸ್ಯ ಎಂ.ಶಿವರಾಜು ಮತ್ತು ರಾಜ್ಯ ಚುನಾವಣಾ ಆಯೋಗ ಪ್ರತ್ಯೇಕವಾಗಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ನಡೆಸಿದ್ದ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕ್ ನೇತೃತ್ವದ ವಿಭಾಗೀಯ ಪೀಠ ರಾಜ್ಯ ಸರ್ಕಾರದ ವಿಳಂಬನೀತಿಯನ್ನು ತರಾಟೆಗೆ ತೆಗೆದುಕೊಂಡಿದ್ದಲ್ಲದೆ ಶೀಘ್ರ ಚುನಾವಣೆ ನಡೆಸುವಂತೆ ಡಿ.4ರಂದು ಆದೇಶಿಸಿತ್ತು. ಹಾಲಿ ಇರುವ 198 ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಏರಿಸಿದ ಬಳಿಕ ಬಿಬಿಎಂಪಿಗೆ ಚುನಾವಣೆ ನಡೆಸಬೇಕೆನ್ನುವ ಸರ್ಕಾರದ ಇರಾದೆಗೆ ತಣ್ಣೀರೆರಚಿದ್ದ ಹೈಕೋರ್ಟ್ ಪೀಠ ಡಿಸೆಂಬರ್ ಒಳಗೆ ಚುನಾವಣೆ ಅಧಿಸೂಚನೆ ಹೊರಡಿಸಿ 6 ವಾರಗಳೊಳಗೆ ಈಗಿರುವ 198 ವಾರ್ಡ್‌ಗಳಿಗೆ ಚುನಾವಣೆ ನಡೆಸುವಂತೆ ಸೂಚನೆ ನೀಡಿತ್ತು. ಇದನ್ನು ಪ್ರಶ್ನಿಸಿ ಇದೀಗ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದೆ.



Edit with WPS Office

ಕನ್ನಡಪ್ರಭ

# ಜನದಟ್ಟಣೆ ಸ್ಥಳದಲ್ಲಿ 15 ದಿನಕ್ಕೊಮ್ಮೆ ಸೋಂಕು ಪರೀಕ್ಷಾ ಶಿಬಿರಕ್ಕೆ ಸೂಚನೆ

## ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ ಆಯುಕ್ತ ಮಂಜುನಾಥ್ ಪ್ರಸಾದ್ ನಿರ್ದೇಶನ

## ನಿತ್ಯ 41 ಸಾವಿರ ಜನರಿಗೆ ಪರೀಕ್ಷೆ | ಇದರಿಂದ ಸೋಂಕಿತರ ಗುರುತಿಸಲು ಸಹಕಾರಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಲ್ಲಿ ಅತಿ ಹೆಚ್ಚು ಜನದಟ್ಟಣೆ ಸೇರುವ ಪ್ರದೇಶಗಳಲ್ಲಿ ಪ್ರತಿ 15 ದಿನಕ್ಕೊಮ್ಮೆ ಕಡ್ಡಾಯವಾಗಿ ಕೊರೋನಾ ಸೋಂಕು ಪರೀಕ್ಷೆಯನ್ನು ಮುಂದುವರಿಸುವಂತೆ ಸೂಚಿಸಲಾಗಿದೆ ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ತಿಳಿಸಿದರು.

ಕೈಗಾರಿಕಾ ಪ್ರದೇಶಗಳು, ಕಾರ್ಖಾನೆಗಳು, ಮಾರುಕಟ್ಟೆಗಳು, ವಸತಿ ಸಮುಚ್ಚಯಗಳು, ವಿಲ್ಲಾ ಹಾಗೂ ಜನ ನಿಬಿಡ ಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಿಸುವವರಿಗೆ ಪ್ರತಿ 15 ದಿನಕ್ಕೊಮ್ಮೆ ಕಡ್ಡಾಯವಾಗಿ ಸೋಂಕು ಪರೀಕ್ಷೆ ನಡೆಸಲು ಗುರುವಾರ ನಡೆದ ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ ನಿರ್ದೇಶನ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಜನ ಹೆಚ್ಚು ಸೇರುವ ಪ್ರದೇಶಗಳಲ್ಲಿ ಪ್ರತಿ 15 ದಿನಕ್ಕೊಮ್ಮೆ ಕಡ್ಡಾಯ ಸೋಂಕು ಪರೀಕ್ಷಾ ಶಿಬಿರಗಳನ್ನು ಆಯೋಜಿಸಿ ಮುಂದುವರಿಸುವಂತೆ ಸೂಚಿಸಲಾಗಿದೆ ಎಂದು ಆಯುಕ್ತರು ತಿಳಿಸಿದ್ದಾರೆ.



ನಗರದಲ್ಲಿ ನಿತ್ಯ 41 ಸಾವಿರ ಜನರನ್ನು ಸೋಂಕು ಪರೀಕ್ಷೆಗೆ ಒಳಪಡಿಸುತ್ತಿದೆ. ಹೀಗಾಗಿ, ಸೋಂಕಿತರನ್ನು ಶೀಘ್ರ ಗುರುತಿಸಲು ಸಹಕಾರಿಯಾಗಿದ್ದು, ಸೋಂಕು ಹರಡುವಿಕೆಗೆ ಕಡಿವಾಣ ಹಾಕಲು ಸಹಕಾರಿಯಾಗಿದೆ ಎಂದು ಹೇಳಿದರು.

ಇನ್ನು ರಾಜ್ಯದಲ್ಲಿ ಪ್ರತಿದಿನ ಒಂದು ಲಕ್ಷಕ್ಕಿಂತ ಹೆಚ್ಚು ಜನರನ್ನು ಸೋಂಕು ಪರೀಕ್ಷೆಗೆ ಒಳಪಡಿಸಲಾಗುತ್ತಿದ್ದು, ಇದರಲ್ಲಿ 90 ಸಾವಿರ ಜನರ ಗಂಟಲು ದ್ರವ ಮಾದರಿ ಹಾಗೂ 10 ಸಾವಿರ ಜನರನ್ನು ರ್‍ಯಾಪಿಡ್ ಆ್ಯಂಟಿಜೆನ್ ಸೋಂಕು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ ಎಂದು ಆಯುಕ್ತರು ಮಾಹಿತಿ ನೀಡಿದರು.

### 606 ಮಂದಿಗೆ ಸೋಂಕು: 923 ಮಂದಿ ಗುಣಮುಖ

**ಬೆಂಗಳೂರು:** ರಾಜಧಾನಿ ಬೆಂಗಳೂರಿನಲ್ಲಿ ಶನಿವಾರ 606 ಹೊಸ ಕೊರೋನಾ ಸೋಂಕು ಪ್ರಕರಣ ಪತ್ತೆಯಾಗಿದ್ದು, 923 ಮಂದಿ ಗುಣಮುಖರಾಗಿದ್ದಾರೆ. ಆರು ಮಂದಿ ಮೃತಪಟ್ಟ ವರದಿಯಾಗಿದೆ. ಈ ಮೂಲಕ ನಗರದಲ್ಲಿ ಒಟ್ಟು ಸೋಂಕಿತರ ಸಂಖ್ಯೆ 3,77,857ಕ್ಕೆ ಏರಿಕೆಯಾಗಿದ್ದು, ಗುಣಮುಖರ ಸಂಖ್ಯೆ 3,60,724 ತಲುಪಿದೆ. ಇನ್ನು 12,902 ಸಕ್ರಿಯ ಸೋಂಕಿತರಿದ್ದು, ಆಸ್ಪತ್ರೆ, ಆರೈಕೆ ಕೇಂದ್ರ ಹಾಗೂ ಹೋಂ ಐಸೋಲೇಷನ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರಲ್ಲಿ 111 ಮಂದಿ ಆರೋಗ್ಯ ಸ್ಥಿತಿ ಗಂಭೀರಗೊಂಡಿರುವ ಹಿನ್ನೆಲೆಯಲ್ಲಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

ಶನಿವಾರ ಆರು ಮಂದಿ ಸೋಂಕಿಗೆ ಬಲಿಯಾದ ವರದಿಯಾಗಿದ್ದು, ಒಟ್ಟು ಮೃತರ ಸಂಖ್ಯೆ 4,230 ಏರಿಕೆಯಾಗಿದೆ.

ಕನ್ನಡಪ್ರಭ Sun, 13 December 2020
https://kpepaper.asianetnews.com/c/56981365

Edit with WPS Office

# ಸೈನಿಕರು, ಬಿಬಿಎಂಪಿಯಿಂದ ಹಲಸೂರು ಕೆರೆಯ ಸ್ವಚ್ಛತೆ

## 5 ಬೋಟಲ್ಲಿ 230 ಸಿಬ್ಬಂದಿಯಿಂದ ಸ್ವಚ್ಛತಾ ಕಾರ್ಯ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮದ್ರಾಸ್ ಎಂಜಿನಿಯರಿಂಗ್ ಗ್ರೂಪ್ (ಎಂಇಜಿ) ಹಾಗೂ ಬಿಬಿಎಂಪಿ ಕೆರೆ ನಿರ್ವಹಣಾ ಸಿಬ್ಬಂದಿ ಜಂಟಿಯಾಗಿ ಹಲಸೂರು ಕೆರೆ ಸ್ವಚ್ಛತಾ ಕಾರ್ಯ ಭರದಿಂದ ನಡೆಯುತ್ತಿದೆ.

ಒಟ್ಟು 113 ಎಕರೆ ಇರುವ ಹಲಸೂರು ಕೆರೆಯನ್ನು ಕಳೆದ ಒಂದು ವಾರದಿಂದ ಬಿಬಿಎಂಪಿ ಕೆರೆಗಳ ನಿರ್ವಹಣಾ ಸಿಬ್ಬಂದಿ ಹಾಗೂ ಮದ್ರಾಸ್ ಎಂಜಿನಿಯರಿಂಗ್ ಗ್ರೂಪ್ ಸಿಬ್ಬಂದಿ ಜಂಟಿಯಾಗಿ ಸ್ವಚ್ಛತಾ ಕಾರ್ಯ ನಡೆಸುತ್ತಿದ್ದಾರೆ. ಶನಿವಾರ ಬಿಬಿಎಂಪಿಯ 80 ಸಿಬ್ಬಂದಿ ಹಾಗೂ ಎಂಇಜಿಯ 150 ಸಿಬ್ಬಂದಿ ಐದು ಬೋಟ್ ಬಳಸಿ ಕೆರೆಯನ್ನು ಶುದ್ಧಗೊಳಿಸಿದರು.

ಶನಿವಾರ ಹಲಸೂರು ಕೆರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಕೆರೆ ಸ್ವಚ್ಛತಾ ಕಾರ್ಯಕ್ಕೆ ವ್ಯಕ್ತಪಡಿಸಿ, ಎಂಇಜಿ ತರಬೇತಿ ಸ್ಥಳವಾದ ಹಲಸೂರು ಕೆರೆ ನಗರದ ಪ್ರಮುಖ ಸ್ಥಳವಾಗಿದೆ. ಸಾರ್ವಜನಿಕರ ವಾಯು ವಿಹಾರಕ್ಕೆ ಅನುಕೂಲಕರವಾಗುವಂತೆ ಅಭಿವೃದ್ಧಿ ಮಾಡಬೇಕಿದ್ದು, ಅಭಿವೃದ್ಧಿ ಪಡಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.



ಬಿಬಿಎಂಪಿ ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ಮೋಹನ್ ಕೃಷ್ಣ ಮಾತನಾಡಿ, ಕೆರೆಗೆ ನೀರು ಬಂದು ಸೇರುವ ಜಾಗದಲ್ಲಿ 100 ಅಡಿಯ ಟ್ರ್ಯಾಶ್ ಬ್ಯಾರಿಯರ್ (ಜಾಲರಿ) ಅಳವಡಿಸಲಾಗಿದೆ. ಇದರಿಂದ ತೇಲುವ ವಸ್ತುಗಳು ಅಲ್ಲೇ ಸಂಗ್ರಹವಾಗಲಿದ್ದು, ಕೆರೆಯೊಳಗೆ ಬರುವುದಿಲ್ಲ. ಟ್ರ್ಯಾಶ್ ಬ್ಯಾರಿಯರ್ ಬಳಿ ಸಂಗ್ರಹವಾದ ಪ್ಲಾಸ್ಟಿಕ್ ಸೇರಿದಂತೆ ಇನ್ನಿತರ ತ್ಯಾಜ್ಯವನ್ನು ಆಗಾಗ ತೆರವುಗೊಳಿಸಲಾಗುತ್ತದೆ ಎಂದರು.

ಈ ವೇಳೆ ಶಿವಾಜಿನಗರ ಶಾಸಕ ರಿಜ್ವಾನ್ ಅರ್ಷದ್, ಜಂಟಿ ಆಯುಕ್ತ ಸರ್ಫರಾಜ್ ಖಾನ್, ಕಮಾಂಡೆಂಟ್(ಎಂಇಜಿ ಮತ್ತು ಸೆಂಟರ್) ಬ್ರಿಗೇಡಿಯರ್ ಟಿ.ಪಿ.ಎಸ್. ವಧವಾ ಹಾಗೂ ಅಧಿಕಾರಿಗಳು ಇದ್ದರು.



Edit with WPS Office

ಕನ್ನಡಪ್ರಭ

# ವಾಜಪೇಯಿ ಕ್ರೀಡಾಂಗಣ ನಿರ್ಮಾಣಕ್ಕೆ ಚಾಲನೆ

**• ಕನ್ನಡಪ್ರಭ ವಾರ್ತೆ** ಬೊಮ್ಮನಹಳ್ಳಿ

ಬೊಮ್ಮನಹಳ್ಳಿ ಶಾಸಕ ಸತೀಶ್ ರೆಡ್ಡಿ ಅವರ ಕಾಳಜಿಯಿಂದ ಬಹಳ ದೊಡ್ಡ ಯೋಜನೆಯಾದ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣ ನಿರ್ಮಾಣ ಆಗುತ್ತಿದೆ ಎಂದು ಸಂಸದ ಎಲ್.ಎಸ್.ತೇಜಸ್ವಿ ಸೂರ್ಯ ಹೇಳಿದರು.

ಎಚ್‌ಎಸ್‌ಆರ್ ಬಡಾವಣೆಯಲ್ಲಿ ಹೊಸದಾದ ಅಂತಾರಾಷ್ಟ್ರೀಯ ದರ್ಜೆಯ ಕ್ರೀಡಾ ವ್ಯವಸ್ಥೆಯನ್ನು ಒಳಗೊಂಡ 'ಅಟಲ್ ಬಿಹಾರಿ ವಾಜಪೇಯಿ ಅಂತಾರಾಷ್ಟ್ರೀಯ ಕ್ರೀಡಾಂಗಣ' ನಿರ್ಮಾಣಕ್ಕೆ ಸ್ಥಳೀಯ ಶಾಸಕ ಎಂ. ಸತೀಶ್ ರೆಡ್ಡಿ ಅವರ ನೇತೃತ್ವದಲ್ಲಿ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಕರ್ನಾಟಕ ಸರ್ಕಾರ ಹಾಗೂ ಬಿಬಿಎಂಪಿ ಸಹಯೋಗದಲ್ಲಿ ಸುಮಾರು ₹30 ಕೋಟಿ ವೆಚ್ಚದಲ್ಲಿ 7.24 ಎಕರೆ ವಿಸ್ತೀರ್ಣದಲ್ಲಿ ಸುಸಜ್ಜಿತ ಕ್ರೀಡಾಂಗಣ ನಿರ್ಮಾಣಗೊಳ್ಳಲಿದೆ. ಶಾಸಕರು ತಮ್ಮ ಹುಟ್ಟುಹಬ್ಬದ ಅಂಗವಾಗಿ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬಡವರಿಗೆ ಹಲವು ಯೋಜನೆಗಳನ್ನು ಪ್ರತಿ ವರ್ಷ ಹಮ್ಮಿಕೊಳ್ಳುತ್ತಾ ಬಂದಿದ್ದು, ಇಂತಹ ಆದರ್ಶ ವ್ಯಕ್ತಿಗಳು ಸಮಾಜಕ್ಕೆ ಅತ್ಯಗತ್ಯ ಎಂದರು. ಶಾಸಕ ಎಂ.ಸತೀಶ್ ರೆಡ್ಡಿ ಮಾತನಾಡಿ, ಹುಟ್ಟುಹಬ್ಬ ಎನ್ನುವ ಹೆಸರಿನಲ್ಲಿ ಪ್ರತಿವರ್ಷ ಕಾರ್ಯಕರ್ತರು ಮತ್ತು ಮುಖಂಡರು ಒಟ್ಟಾಗಿ ನಾನಾ ಕಾರ್ಯಕ್ರಮ ರೂಪಿಸುತ್ತಾ ಬಂದಿದ್ದಾರೆ. ಈ ಬಾರಿ ಬಡಮಕ್ಕಳ ಆನ್‌ಲೈನ್ ಕ್ಲಾಸ್‌ಗೆ ಅನುಕೂಲವಾಗಲೆಂದು ಉಚಿತವಾಗಿ ಟ್ಯಾಬ್‌ಗಳನ್ನು ನೀಡಲಾಗಿದೆ. ಇಲ್ಲಿನ ಜನತೆ ನನ್ನನ್ನು ನಂಬಿ ಗೆಲ್ಲಿಸಿದ್ದಾರೆ. ಸಾಕಷ್ಟು ಅಡೆತಡೆ ಎದುರಾದರೂ ಅದೆಲ್ಲವನ್ನೂ ನಿಭಾಯಿಸಿ ಸುಸಜ್ಜಿತ ಕ್ರೀಡಾಂಗಣ ನಿರ್ಮಾಣಕ್ಕೆ ಸಜ್ಜಾಗಿದ್ದೇವೆ. ಅಟಲ್ ಬಿಹಾರಿ ವಾಜಪೇಯಿ ಅವರು ಅಭಿವೃದ್ಧಿ ಹರಿಕಾರ. ಅವರ ಹೆಸರಿನಲ್ಲಿ ಕ್ರೀಡಾಂಗಣ ಅಭಿವೃದ್ಧಿ ಆಗುತ್ತಿರುವುದು ಸಂತಸ ತಂದಿದೆ ಎಂದರು.



ಎಚ್‌ಎಸ್‌ಆರ್ ಬಡಾವಣೆಯಲ್ಲಿ ಹೊಸದಾದ ಅಂತಾರಾಷ್ಟ್ರೀಯ ದರ್ಜೆಯ ಕ್ರೀಡಾ ವ್ಯವಸ್ಥೆಯನ್ನು ಒಳಗೊಂಡ 'ಅಟಲ್ ಬಿಹಾರಿ ವಾಜಪೇಯಿ ಅಂತಾರಾಷ್ಟ್ರೀಯ ಕ್ರೀಡಾಂಗಣ' ನಿರ್ಮಾಣಕ್ಕೆ ಸಂಸದ ತೇಜಸ್ವಿ ಸೂರ್ಯ ಚಾಲನೆ ನೀಡಿದರು. ಶಾಸಕ ಎಂ.ಸತೀಶ್ ರೆಡ್ಡಿ ಇದ್ದರು.

**30 ಕೋಟಿ**
ನಿರ್ಮಾಣ ವೆಚ್ಚ

**7.24 ಎಕರೆ**
ಕ್ರೀಡಾಂಗಣ ವಿಸ್ತೀರ್ಣ

ಬಿಬಿಎಂಪಿ ಜಂಟಿ ಆಯುಕ್ತ ರಾಮಕೃಷ್ಣ, ಮಾಜಿ ಉಪಮಹಾಪೌರ ರಾಮ್ ಮೋಹನ್ ರಾಜ್, ಪಾಲಿಕೆ ಮಾಜಿ ಸದಸ್ಯರಾದ ಗುರುಮೂರ್ತಿ ರೆಡ್ಡಿ, ಬಲ್ಲಿ ರಮೇಶ್, ಶ್ರೀನಿವಾಸ್ ರೆಡ್ಡಿ, ರಾಜ್ಯ ಬಿಜೆಪಿ ಸ್ಲಮ್ ಮೋರ್ಚಾ ಉಪಾಧ್ಯಕ್ಷ ಶ್ರೀನಿವಾಸ್ ರೆಡ್ಡಿ, ಆನಂದ್ ರೆಡ್ಡಿ, ರಾಜ್ಯಸಭೆ ಮಾಜಿ ಸದಸ್ಯ ಕುಪೇಂದ್ರ ರೆಡ್ಡಿ ಮತ್ತಿತರರು ಇದ್ದರು.

ಇದೇ ವೇಳೆ ಬಡವರಿಗೆ ಬಿಬಿಎಂಪಿ ವತಿಯಿಂದ ಒಂಟಿಮನೆ ಹಕ್ಕುಪತ್ರ, ಉಚಿತ ಆರೋಗ್ಯ ಕಾರ್ಡ್, ಅಂಧಮಕ್ಕಳಿಗೆ ಕಂಬಳಿ, ಬಡ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ವಿತರಣೆ ಮಾಡಲಾಯಿತು. ಆರೋಗ್ಯ ತಪಾಸಣಾ ಶಿಬಿರ, ಹೊಂಗಸಂದ್ರದಲ್ಲಿ [illegible] ಉದ್ಯಾನ, ಶೌಚಗೃಹ ಉದ್ಯಾನ [illegible] ಹಲವು ಕಾರ್ಯಕ್ಕೆ ಚಾಲನೆ ನೀಡಿದರು.



Edit with WPS Office

ಕನ್ನಡಪ್ರಭ

## ಗುತ್ತಿಗೆ ನೀಡಲು ಹಣಕ್ಕೆ ಬೇಡಿಕೆ: ಪ್ರತಿಭಟನೆ

**ಕೆ.ಆರ್.ಪುರ:** ಗುತ್ತಿಗೆ ನೀಡಲು ಪಾಲಿಕೆಯ ಅಧಿಕಾರಿಗಳು ಕಮಿಷನ್ ಕೇಳುತ್ತಿದ್ದಾರೆ ಎಂದು ಆರೋಪಿಸಿ ಗುತ್ತಿಗೆದಾರರು, ಮಹದೇವಪುರ ಬಿಬಿಎಂಪಿ ಕಾರ್ಯಪಾಲಕ ಅಭಿಯಂತರರ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು. ಗುತ್ತಿಗೆದಾರರಿಗೆ ಜಾಬ್ ಕೋಡ್ ಕೊಡಲು ಮುಖ್ಯ ಎಂಜಿನಿಯರ್ ಮುನಿರೆಡ್ಡಿ ಮತ್ತು ಅವರ ಸಹಾಯಕ ಅಧಿಕಾರಿಗಳು ಶೇಕಡ 12ರಷ್ಟು ಕಮಿಷನ್ ನೀಡುವಂತೆ ಒತ್ತಾಯಿಸುತ್ತಿದ್ದಾರೆ. ಕಮಿಷನ್ ಹಣ ನೀಡದಿದ್ದರೆ ಟೆಂಡರ್ ಸಲ್ಲಿಸಲು ಅವಕಾಶ ನೀಡುವುದಿಲ್ಲ ಎಂದು ಅಧಿಕಾರಿಗಳು ಬೆದರಿಕೆ ಒಡ್ಡುತ್ತಿದ್ದಾರೆ ಎಂದು ಆರೋಪಿಸಿ ಅಧಿಕಾರಿಗಳ ವಿರುದ್ಧ ಗುತ್ತಿಗೆದಾರ ಪ್ರಕಾಶ್ ರೆಡ್ಡಿ ಆರೋಪಿಸಿದರು. ಸರ್ಕಾರದಿಂದ 14 ಫೈನಾನ್ಸ್, 15 ಫೈನಾನ್ಸ್ ಹಾಗೂ ಪಿಡಬ್ಲ್ಯುಡಿ ಹಾಗೂ ಮೇಯರ್, ಶಾಸಕರ ಫಂಡ್‌ಗಳು ಸೇರಿದಂತೆ ಅನೇಕ ಅನುದಾನ ಬರುತ್ತಿದ್ದರೂ ಸರಿಯಾಗಿ ಬಿಲ್ ಪಾವತಿ ಆಗುತ್ತಿಲ್ಲ ಎಂದು ದೂರಿದರು.



Edit with WPS Office

VK
ವಿಜಯ ಕರ್ನಾಟಕ

# 7 ಸಾವಿರ ರೂ. ಲಂಚ ಪಡೆದ ಹೆಲ್ತ್ ಇನ್‌ಸ್ಪೆಕ್ಟರ್ ಎಸಿಬಿ ಬಲೆಗೆ

■ **ವಿಕ ಸುದ್ದಿಲೋಕ** ಬೆಂಗಳೂರು

ಅಡುಗೆ ಎಣ್ಣೆ ಗಿರಣಿ ಆರಂಭಕ್ಕೆ ಲೈಸೆನ್ಸ್ ನೀಡಲು 7 ಸಾವಿರ ರೂ. ಲಂಚ ಪಡೆದ ಆರೋಪದ ಹಿನ್ನೆಲೆಯಲ್ಲಿ ಬಿಬಿಎಂಪಿಯ ದಾಸರಹಳ್ಳಿ ವಲಯದ ಹಿರಿಯ ಆರೋಗ್ಯ ನಿರೀಕ್ಷಕ ವಿ.ಆರ್.ಪ್ರವೀಣ್ ಕುಮಾರ್ ಅವರನ್ನು ಭ್ರಷ್ಟಾಚಾರ ನಿಗ್ರಹ ದಳ ಬಂಧಿಸಿದೆ.

**ಗಿರಣಿ ಲೈಸೆನ್ಸ್‌ಗೆ ಲಂಚದ ಬೇಡಿಕೆ ಇಟ್ಟ ಅಧಿಕಾರಿ**

ನಗರದ ಮಲ್ಲಸಂದ್ರ ನಿವಾಸಿಯೊಬ್ಬರು ಕೊರೊನಾ ಲಾಕ್‌ಡೌನ್‌ನಿಂದ ಉದ್ಯೋಗ ಕಳೆದುಕೊಂಡಿದ್ದರು. ಹೀಗಾಗಿ, ಸ್ವಂತ ಉದ್ಯಮವಾಗಿ ಅಡುಗೆ ಎಣ್ಣೆ ಗಿರಣಿ ಆರಂಭಿಸಲು ಮುಂದಾಗಿದ್ದರು. ಪರವಾನಗಿ ಪಡೆಯಲು ಟಿ.ದಾಸರಹಳ್ಳಿ ಪಾಲಿಕೆ ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಪರವಾನಗಿ ವಿತರಣೆಗೆ ಒಂದು ತಿಂಗಳು ಸಮಯ ಬೇಕಾಗುತ್ತದೆ. ತ್ವರಿತವಾಗಿ ವಿತರಿಸಲು 12 ಸಾವಿರ ರೂ. ಲಂಚ ನೀಡಬೇಕು ಎಂದು ಪ್ರವೀಣ್‌ಕುಮಾರ್ ಬೇಡಿಕೆ ಇಟ್ಟಿದ್ದರು. ಅಲ್ಲದೇ ಮುಂಗಡವಾಗಿ 3 ಸಾವಿರ ರೂ. ಲಂಚ ಪಡೆದಿದ್ದರು. ಮತ್ತೆ ಬಾಕಿ ಲಂಚದ ಹಣಕ್ಕೆ ಪೀಡಿಸಿದ ಹಿನ್ನೆಲೆಯಲ್ಲಿ ಅರ್ಜಿದಾರರು ಎಸಿಬಿಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಟ್ರ್ಯಾಪ್ ಕಾರ್ಯಾಚರಣೆ ನಡೆಸಿದ ಎಸಿಬಿ ಅಧಿಕಾರಿಗಳು, ಅರ್ಜಿದಾರರಿಂದ 7 ಸಾವಿರ ರೂ. ಲಂಚ ಪಡೆಯುವ ವೇಳೆ ಪ್ರವೀಣ್ ಅವರನ್ನು ಬಂಧಿಸಿದ್ದಾರೆ. ತನಿಖೆ ಮುಂದುವರಿದಿದೆ ಎಂದು ಎಸಿಬಿ ತಿಳಿಸಿದೆ.

Edit with WPS Office

VK
ವಿಜಯ ಕರ್ನಾಟಕ

# ಕ್ರೀಡಾಂಗಣ ಕಾಮಗಾರಿಗೆ ಚಾಲನೆ

**ಬೆಂಗಳೂರು ದಕ್ಷಿಣ:** ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣ ನಿರ್ಮಾಣದಿಂದ ಬಡವರು, ಶ್ರಮಿಕರು ಹಾಗೂ ಸರಕಾರಿ ಶಾಲೆಯ ಮಕ್ಕಳಿಗೆ ಹೆಚ್ಚು ಸಹಕಾರಿಯಾಗಲಿದೆ ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದರು.

**ಶಾಸಕ ಎಂ.ಸತೀಶ್ ರೆಡ್ಡಿ ಹುಟ್ಟುಹಬ್ಬದ ಅಂಗವಾಗಿ ನಾನಾ ಚಟುವಟಿಕೆಗಳು**

ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕ್ರೀಡಾಂಗಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ''ಶಾಸಕ ಸತೀಶ್ ರೆಡ್ಡಿ ಅವರ ಕಾಳಜಿಯಿಂದ ಕ್ರೀಡಾಂಗಣ ನಿರ್ಮಾಣವಾಗುತ್ತಿರುವುದು ಶ್ಲಾಘನೀಯ. ಅವರು ತಮ್ಮ ಹುಟ್ಟುಹಬ್ಬದ ಅಂಗವಾಗಿ ಪ್ರತಿ ವರ್ಷ ಬಡವರಿಗೆ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳುತ್ತಾ ಬಂದಿದ್ದಾರೆ. ಕೂಡ್ಲುದಲ್ಲಿ ಐದು ಎಕರೆ 24 ಗುಂಟೆ ವಿಸ್ತೀರ್ಣದಲ್ಲಿ ಆಧುನಿಕ ಸೌಲಭ್ಯವುಳ್ಳ ಬೃಹತ್ ಕ್ರೀಡಾಂಗಣ ನಿರ್ಮಾಣವಾಗಲಿದೆ,'' ಎಂದರು.

ಶಾಸಕ ಎಂ.ಸತೀಶ್ ರೆಡ್ಡಿ ಮಾತನಾಡಿ, ''ಆನ್‌ಲೈನ್ ತರಗತಿ ಹಿನ್ನೆಲೆಯಲ್ಲಿ ಬಡ ಮಕ್ಕಳಿಗೆ ಟ್ಯಾಬ್‌ಗಳನ್ನು ಉಚಿತವಾಗಿ ವಿತರಿಸಲಾಗಿದೆ. ಕ್ರೀಡಾಂಗಣ ನಿರ್ಮಾಣ ನಿಟ್ಟಿನಲ್ಲಿ ಸಾಕಷ್ಟು ಅಡೆತಡೆಗಳು ಎದುರಾಗಿದ್ದವು. ಆದರೆ ಅದೆಲ್ಲವನ್ನೂ ನಿಭಾಯಿಸಿ ಕ್ರೀಡಾಂಗಣ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಅಟಲ್ ಬಿಹಾರಿ ವಾಜಪೇಯಿ ಅಭಿವೃದ್ಧಿಯ ಹರಿಕಾರರು. ಅವರ ಹೆಸರಿನಲ್ಲಿ ಕ್ರೀಡಾಂಗಣ ನಿರ್ಮಾಣವಾಗುತ್ತಿರುವುದು ಸಂತಸ ತಂದಿದೆ,'' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಿಬಿಎಂಪಿ ಜಂಟಿ ಆಯುಕ್ತ ರಾಮಕೃಷ್ಣ, ಮಾಜಿ ಉಪ ಮಹಾಪೌರ ರಾಮ್ ಮೋಹನ್ ರಾಜ್, ಪಾಲಿಕೆ ಮಾಜಿ ಸದಸ್ಯರಾದ ಗುರುಮೂರ್ತಿ ರೆಡ್ಡಿ, ಜಲ್ಲಿ ರಮೇಶ್, ಶ್ರೀನಿವಾಸ್ ರೆಡ್ಡಿ, ರಾಜ್ಯ ಬಿಜೆಪಿ ಸ್ಲಮ್ ಮೋರ್ಚಾ ಉಪಾಧ್ಯಕ್ಷ ಶ್ರೀನಿವಾಸ್ ರೆಡ್ಡಿ, ಆನಂದ್ ರೆಡ್ಡಿ, ರಾಜ್ಯಸಭೆ ಮಾಜಿ ಸದಸ್ಯ ಕುಪೇಂದ್ರ ರೆಡ್ಡಿ ಮತ್ತಿತರರು ಇದ್ದರು.

ಇದೇ ಸಂದರ್ಭದಲ್ಲಿ ಬಡವರಿಗೆ ಬಿಬಿಎಂಪಿ ವತಿಯಿಂದ ಒಂಟಿ ಮನೆ ಹಕ್ಕುಪತ್ರ ವಿತರಣೆ, ಉಚಿತ ಆರೋಗ್ಯ ಕಾರ್ಡ್ ವಿತರಣೆ, ಅಂಧ ಮಕ್ಕಳಿಗೆ ಕಂಬಳಿ ವಿತರಣೆ, ಬಡ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ವಿತರಣೆ, ಆರೋಗ್ಯ ತಪಾಸಣಾ ಶಿಬಿರ, ಹೊಂಗಸಂದ್ರದಲ್ಲಿ ಕೊಳವೆಬಾವಿ ಉದ್ಘಾಟನೆ, ಶೌಚಾಲಯ ಉದ್ಘಾಟನೆ ಸೇರಿದಂತೆ ಹಲವಾರು ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು.



ಬೊಮ್ಮನಹಳ್ಳಿ ಶಾಸಕ ಸತೀಶ್ ರೆಡ್ಡಿಯವರ ಹುಟ್ಟುಹಬ್ಬದ ಅಂಗವಾಗಿ ಬಡವರಿಗೆ ಬಟ್ಟೆ ವಿತರಿಸಲಾಯಿತು. ಸಚಿವ ಆರ್.ಅಶೋಕ್, ಸಂಸದ ತೇಜಸ್ವಿ ಸೂರ್ಯ ಇದ್ದರು.

Edit with WPS Office

VK ವಿಜಯ ಕರ್ನಾಟಕ

ಬಿಬಿಎಂಪಿ-ಎಂಇಜಿ ಜಂಟಿ ಯೋಜನೆ | 25 ಲೋಡ್ ಪ್ಲಾಸ್ಟಿಕ್, ಕಳೆ ತೆರವು

# ಹಲಸೂರು ಕೆರೆ ಸ್ವಚ್ಛತೆಗೆ ಹರಸಾಹಸ

**ವಿಕ ಸುದ್ದಿಲೋಕ** ಬೆಂಗಳೂರು

ಬಿಬಿಎಂಪಿಯು ಮದ್ರಾಸ್ ಎಂಜಿನಿಯರಿಂಗ್ ಗ್ರೂಪ್‌ನ (ಎಂಇಜಿ) ಸಹಯೋಗದಲ್ಲಿ ಶನಿವಾರ ಹಲಸೂರು ಕೆರೆಯಲ್ಲಿ ಸ್ವಚ್ಛತಾ ಕಾರ್ಯ ಕೈಗೊಂಡು 25-30 ಲೋಡ್‌ಗಳಷ್ಟು ಕಳೆ ಮತ್ತು ಪ್ಲಾಸ್ಟಿಕ್ ತ್ಯಾಜ್ಯವನ್ನು ತೆರವುಗೊಳಿಸಿತು. ಒಟ್ಟು 230 ಮಂದಿ ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

**ಸ್ವಚ್ಛತಾ ಕಾರ್ಯದಲ್ಲಿ 230 ಮಂದಿ ಭಾಗಿ**



ಒಟ್ಟು 113 ಎಕರೆಯಷ್ಟು ವಿಸ್ತೀರ್ಣವುಳ್ಳ ಹಲಸೂರು ಕೆರೆಯನ್ನು ಕಳೆದ ಒಂದು ವಾರದಿಂದ ಪಾಲಿಕೆಯ ಕೆರೆ ವಿಭಾಗದ 50 ಮತ್ತು ಎಂಇಜಿಯ 50 ಸಿಬ್ಬಂದಿಯು ಸ್ವಚ್ಛಗೊಳಿಸುತ್ತಿದ್ದಾರೆ. ಶನಿವಾರ ಪಾಲಿಕೆಯ 80 ಮಂದಿ ಮತ್ತು ಎಂಇಜಿಯ 150 ಸಿಬ್ಬಂದಿ ಕೆರೆಯನ್ನು ಶುಚಿಗೊಳಿಸಿದರು. 5 ಬೋಟ್‌ಗಳನ್ನು ಬಳಸಿಕೊಂಡು ಕಳೆ, ಪ್ಲಾಸ್ಟಿಕ್ ತ್ಯಾಜ್ಯವನ್ನು ತೆರವು ಮಾಡಲಾಯಿತು.

ಬೋಟ್‌ನಲ್ಲೇ ಕೆರೆಯಲ್ಲಿ ತಪಾಸಣೆ ನಡೆಸಿದ ಆಯುಕ್ತ ಎನ್.ಮಂಜುನಾಥ ಪ್ರಸಾದ್, ಸ್ವಚ್ಛತಾ ಕಾರ್ಯ ಕೈಗೊಂಡು ಕೆರೆಯನ್ನು ಆಕರ್ಷಕ ತಾಣವನ್ನಾಗಿ ಮಾಡಿರುವ ಸಿಬ್ಬಂದಿಯ ಕಾರ್ಯವೈಖರಿಯನ್ನು ಶ್ಲಾಘಿಸಿದರು. "ಎಂಇಜಿಗಳ ತರಬೇತಿ ಸ್ಥಳವಾಗಿರುವ ಹಲಸೂರು ಕೆರೆಯನ್ನು ಆಕರ್ಷಣೀಯ ತಾಣವನ್ನಾಗಿ ಅಭಿವೃದ್ಧಿಪಡಿಸಬೇಕಿದೆ. ಸಾರ್ವಜನಿಕರ ವಾಯುವಿಹಾರಕ್ಕೆ ಅನುಕೂಲವಾಗುವಂತೆ ಮಾಡಬೇಕಿದೆ. ಈ ನಿಟ್ಟಿನಲ್ಲಿ ಮುಂಬರುವ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ಮೀಸಲಿರಿಸಿ, ಕೆರೆಯನ್ನು ಅಭಿವೃದ್ಧಿಪಡಿಸಲು ಕ್ರಮ ವಹಿಸಲಾಗುವುದು," ಎಂದು ಹೇಳಿದರು.

ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ಮೋಹನ್ ಕೃಷ್ಣ ಮಾತನಾಡಿ, "ನಗರದ ಕೇಂದ್ರ ಭಾಗದಲ್ಲಿರುವ ಹಲಸೂರು ಕೆರೆಯ ಅಂಗಳದಲ್ಲಿ ಬೆಳೆದಿದ್ದ ಕಳೆ, ಸಂಗ್ರಹವಾಗಿದ್ದ ತ್ಯಾಜ್ಯವನ್ನು ತೆರವುಗೊಳಿಸಲಾಗಿದೆ. ಇದೀಗ ಕೆರೆಗೆ ನೀರು ಹರಿಯುವ ಕಾಲುವೆ ಬಳಿ 100 ಅಡಿಯ ಟ್ರ್ಯಾಶ್ ಬ್ಯಾರಿಯರ್ ಅಳವಡಿಸಲಾಗಿದೆ. ಇದರಿಂದ ಪ್ಲಾಸ್ಟಿಕ್ ಮತ್ತು ಇನ್ನಿತರೆ ವಸ್ತುಗಳು ಅಲ್ಲೇ ಸಂಗ್ರಹವಾಗಲಿದ್ದು, ಕೆರೆ ಸೇರುವುದು ತಪ್ಪಲಿದೆ. ಟ್ರ್ಯಾಶ್ ಬ್ಯಾರಿಯರ್‌ನಲ್ಲಿ ಸಂಗ್ರಹವಾಗುವ ಕಸವನ್ನು ಆಗಿಂದಾಗ್ಗೆ ತೆರವು ಮಾಡಲಾಗುವುದು," ಎಂದು ತಿಳಿಸಿದರು.

Edit with WPS Office

ವಿಜಯವಾಣಿ

ವಿಜಯವಾಣಿ ನಂ.1

# ಹಲಸೂರು ಕೆರೆಯಿಂದ 30 ಲೋಡ್ ಕಳೆ, ಪ್ಲಾಸ್ಟಿಕ್ ತೆರವು



ಹಲಸೂರು ಕೆರೆಯನ್ನು ಸ್ವಚ್ಛಗೊಳಿಸುತ್ತಿರುವ ಮದ್ರಾಸ್ ಇಂಜಿನಿಯರಿಂಗ್ ಗ್ರೂಪ್ ಮತ್ತು ಬಿಬಿಎಂಪಿ ಸಿಬ್ಬಂದಿ.

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಬಿಬಿಎಂಪಿ ಮತ್ತು ಮದ್ರಾಸ್ ಇಂಜಿನಿಯರಿಂಗ್ ಗ್ರೂಪ್ (ಎಂಇಜಿ) ಸಹಯೋಗದೊಂದಿಗೆ ಹಮ್ಮಿಕೊಂಡಿರುವ ಹಲಸೂರು ಕೆರೆ ತೀವ್ರ ಸ್ವಚ್ಛತಾ ಕಾರ್ಯಾಚರಣೆಯಲ್ಲಿ 30 ಲೋಡ್ ಕಳೆ ಮತ್ತು ಪ್ಲಾಸ್ಟಿಕ್ ತೆರವುಗೊಳಿಸಲಾಯಿತು.

113 ಎಕರೆ ವ್ಯಾಪ್ತಿಯುಳ್ಳ ಕೆರೆಯಲ್ಲಿ ವಾರದಿಂದ ಬಿಬಿಎಂಪಿಯ 50 ಸಿಬ್ಬಂದಿ ಹಾಗೂ ಎಂಇಜಿಯ 50 ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಶನಿವಾರ ಪಾಲಿಕೆಯ 80 ಮತ್ತು ಎಂಇಜಿಯ 150 ಸಿಬ್ಬಂದಿ ಕೆಲಸ ಮಾಡಿದ್ದಾರೆ. ಐದು ಬೋಟ್‌ಗಳ ಮೂಲಕ ಕಳೆ ತೆರವುಗೊಳಿಸಲಾಯಿತು.

» ಬಿಬಿಎಂಪಿ, ಎಂಇಜಿ ಕಾರ್ಯಾಚರಣೆ

ಸ್ವಚ್ಛತಾ ಕಾರ್ಯವನ್ನು ಬಿಬಿಎಂಪಿ ಆಯುಕ್ತ ಮಂಜುನಾಥಪ್ರಸಾದ್ ವೀಕ್ಷಿಸಿದರು. ಕೆರೆಯನ್ನು ಆಕರ್ಷಕ ತಾಣವನ್ನಾಗಿಸಿರುವ ಪಾಲಿಕೆ ಸಿಬ್ಬಂದಿ ಹಾಗೂ ಎಂಇಜಿ ಕಾರ್ಯ ಶ್ಲಾಘನೀಯ. ಕೆರೆಯನ್ನು ಸಾರ್ವಜನಿಕರ ವಾಯುವಿಹಾರಕ್ಕೆ ಅನುಕೂಲಕರವಾಗುವಂತೆ ಮಾಡಬೇಕಿದ್ದು, ಮುಂದಿನ ಆಯವ್ಯಯದಲ್ಲಿ ಅನುದಾನ ಮೀಸಲಿರಿಸಿ ಅಭಿವೃದ್ಧಿ ಪಡಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ತಿಳಿಸಿದರು.

ಬಿಬಿಎಂಪಿ ಕೆರೆಗಳ ವಿಭಾಗದ ಮುಖ್ಯ ಅಭಿಯಂತರ ಮೋಹನ್ ಕೃಷ್ಣ ಮಾತನಾಡಿ, ಹಲಸೂರು ಕೆರೆಯು ನಗರ ಕೇಂದ್ರದಲ್ಲಿದ್ದು, ಕೆರೆಯ ಅಂಗಳದಲ್ಲಿ ಬೆಳೆದಿದ್ದ ಕಳೆ, ಸಂಗ್ರಹವಾಗಿದ್ದ ತ್ಯಾಜ್ಯವನ್ನು ಸ್ವಚ್ಛ ಮಾಡಲಾಗುತ್ತಿದೆ. ಇದೀಗ ಹೊಸದಾಗಿ ಕೆರೆಯ ಇನ್‌ಲೆಟ್ ಬಳಿ 100 ಅಡಿಯ ಟ್ರ್ಯಾಶ್ ಬ್ಯಾರಿಯರ್ ಅಳವಡಿಸಲಾಗಿದೆ. ತೇಲುವ ವಸ್ತುಗಳು ಇನ್ನುಮುಂದೆ ಅಲ್ಲೇ ಸಂಗ್ರಹವಾಗಲಿದ್ದು, ಕೆರೆಯೊಳಗೆ ಬರುವುದಿಲ್ಲ. ಟ್ರ್ಯಾಶ್ ಬ್ಯಾರಿಯರ್ ಬಳಿ ಸಂಗ್ರಹವಾದ ಪ್ಲಾಸ್ಟಿಕ್ ಸೇರಿ ತ್ಯಾಜ್ಯವನ್ನು ಆಗಿಂದಾಗ್ಗೆ ತೆರವುಗೊಳಿಸಲಾಗುತ್ತದೆ ಎಂದರು.

ಶಾಸಕ ರಿಜ್ವಾನ್ ಅರ್ಷದ್, ಘನತ್ಯಾಜ್ಯ ವಿಭಾಗದ ಜಂಟಿ ಆಯುಕ್ತ ಸರ್ಫರಾಜ್ ಖಾನ್, ಎಂಇಜಿ ಮತ್ತು ಸೆಂಟರ್ ಕಮಾಂಡೆಂಟ್ ಬ್ರಿಗೇಡಿಯರ್ ಟಿ.ಪಿ.ಎಸ್. ವಡಾವ್ ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.



Edit with WPS Office

ವಿಜಯವಾಣಿ

ವಿಜಯವಾಣಿ ನಂ.1

# ವಾಜಪೇಯಿ ಕ್ರೀಡಾಂಗಣಕ್ಕೆ ಅಡಿಗಲ್ಲು

## ಬೊಮ್ಮನಹಳ್ಳಿಯಲ್ಲಿ ನಿರ್ಮಾಣ | ಸಂಸದ ತೇಜಸ್ವಿ ಸೂರ್ಯ, ಶಾಸಕ ಸತೀಶ್ ರೆಡ್ಡಿ ಭಾಗಿ

■ ವಿಜಯವಾಣಿ ಸುದ್ದಿಜಾಲ ಬೊಮ್ಮನಹಳ್ಳಿ

ಬಡವರು, ಶ್ರಮಿಕರ ಹಾಗೂ ಸರ್ಕಾರಿ ಶಾಲಾಮಕ್ಕಳ ಕ್ರೀಡಾ ಚಟುವಟಿಕೆಗೆ ಬೊಮ್ಮನಹಳ್ಳಿಯಲ್ಲಿ ತಲೆಯೆತ್ತಲಿರುವ 'ಅಟಲ್ ಬಿಹಾರಿ ವಾಜಪೇಯಿ ಅಂತಾರಾಷ್ಟ್ರೀಯ ಕ್ರೀಡಾಂಗಣ' ಸಹಕಾರಿಯಾಗಲಿದೆ ಎಂದು ಸಂಸದ ಹಾಗೂ ಬಿಜೆಪಿ ಯುವಮೋರ್ಚಾ ಅಧ್ಯಕ್ಷ ಎಲ್.ಎಸ್. ತೇಜಸ್ವಿಸೂರ್ಯ ಹೇಳಿದ್ದಾರೆ.

ಕರ್ನಾಟಕ ಸರ್ಕಾರ ಹಾಗೂ ಬಿಬಿಎಂಪಿ ಸಹಯೋಗದಲ್ಲಿ ನಿರ್ಮಾಣವಾಗಲಿರುವ 'ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣ' ಸೇರಿ ವಿವಿಧ ಕಾಮಗಾರಿಗಳಿಗೆ ಎಚ್‌ಎಸ್‌ಆರ್ ಬಡಾವಣೆಯಲ್ಲಿ ಶನಿವಾರ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು. 7.24 ಎಕರೆ ಪ್ರದೇಶದಲ್ಲಿ ಬೃಹತ್ ಕ್ರೀಡಾಂಗಣ ಸಿದ್ಧವಾಗಲಿದೆ. ಅಥ್ಲೆಟಿಕ್ಸ್ ಕ್ರೀಡೆಗಳಿಗೆ ಅನುಕೂಲವಾಗುವಂತೆ ಅಭಿವೃದ್ಧಿಪಡಿಸುತ್ತಿರುವ ಶಾಸಕ ಸತೀಶ್ ರೆಡ್ಡಿ ಕಾಳಜಿ ಶ್ಲಾಘನೀಯ ಎಂದರು.

» **ಸರ್ಕಾರ ಮತ್ತು ಬಿಬಿಎಂಪಿ ಸಹಯೋಗ**

ಶಾಸಕ ಎಂ. ಸತೀಶ್ ರೆಡ್ಡಿ ಮಾತನಾಡಿ, ಹುಟ್ಟುಹಬ್ಬದ ಹೆಸರಿನಲ್ಲಿ ಪ್ರತಿವರ್ಷ ಕಾರ್ಯಕರ್ತರು ಮುಖಂಡರು ಸೇರಿ ಕಾರ್ಯಕ್ರಮಗಳನ್ನು ರೂಪಿಸುತ್ತ ಬಂದಿದ್ದಾರೆ. ಬಡಮಕ್ಕಳಿಗೆ ಆನ್‌ಲೈನ್ ತರಗತಿಗಳಿಗೆ ಸಹಕಾರಿಯಾಗಲಿ ಎನ್ನುವ ನಿಟ್ಟಿನಲ್ಲಿ ಟ್ಯಾಬ್‌ಗಳನ್ನು ಉಚಿತವಾಗಿ ವಿತರಣೆ ಮಾಡಲಾಗಿದೆ. ನಾನು ಟೀಕೆ-ಟಿಪ್ಪಣಿಗಳನ್ನೂ ಕೂಡ ಆಶೀರ್ವಾದ ಎಂದು ತೆಗೆದುಕೊಳ್ಳುವ ವ್ಯಕ್ತಿ. ಮಾನವ ಧರ್ಮವನ್ನು ಸಮರ್ಪಕವಾಗಿ ಅಳವಡಿಸಿಕೊಂಡಾಗ ಮಾತ್ರ ಉತ್ತಮ ಸಮಾಜ ಕಟ್ಟಲು ಸಾಧ್ಯ ಎಂದರು.

ಪಾಲಿಕೆ ಜಂಟಿ ಆಯುಕ್ತ ರಾಮಕೃಷ್ಣ, ಮಾಜಿ ಉಪ ಮಹಾಪೌರ ರಾಮಮೋಹನ್ ರಾಜ್, ಪಾಲಿಕೆ ಮಾಜಿ ಸದಸ್ಯರಾದ ಗುರುಮೂರ್ತಿ ರೆಡ್ಡಿ, ಜಲ್ಲಿ ರಮೇಶ್, ಶ್ರೀನಿವಾಸರೆಡ್ಡಿ, ರಾಜ್ಯ ಬಿಜೆಪಿ ಸ್ಲಂ ಮೋರ್ಚಾ ಉಪಾಧ್ಯಕ್ಷ ಶ್ರೀನಿವಾಸರೆಡ್ಡಿ, ರಾಜ್ಯಸಭೆ ಮಾಜಿ ಸದಸ್ಯ ಕುಪೇಂದ್ರ ರೆಡ್ಡಿ ಮತ್ತಿತರರು ಇದ್ದರು.



ವಾಜಪೇಯಿ ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಸಂಸದ ತೇಜಸ್ವಿಸೂರ್ಯ, ಶಾಸಕ ಸತೀಶ್ ರೆಡ್ಡಿ, ಮಾಜಿ ಉಪ ಮೇಯರ್ ರಾಮಮೋಹನ್ ರಾಜು ಇತರರಿದ್ದರು.

> ಮಾಜಿ ಪ್ರಧಾನಿ, ಅಭಿವೃದ್ಧಿ ಹರಿಕಾರ ವಾಜಪೇಯಿ ಹೆಸರಿನಲ್ಲಿ ಕ್ರೀಡಾಂಗಣ ನಿರ್ಮಾಣವಾಗುತ್ತಿರುವುದು ಸಂತಸ ತಂದಿದೆ. ದೇಶದ ರಕ್ಷಣೆಗಾಗಿ ಅವರು ಕೈಗೊಂಡ ಕ್ರಮಗಳನ್ನು ನಾವೆಂದೂ ಮರೆಯುವುದಿಲ್ಲ. ಅಟಲ್‌ರ ಆದರ್ಶಗಳನ್ನು ಮೈಗೂಡಿಸಿಕೊಂಡಿರುವ ಇಂದಿನ ಪ್ರಧಾನಿ ನರೇಂದ್ರ ಮೋದಿ ದೇಶದ ಅಭಿವೃದ್ಧಿಗೆ ಹಲವಾರು ಯೋಜನೆಗಳನ್ನು ರೂಪಿಸುತ್ತಿದ್ದಾರೆ.
>
> । ಎಂ. ಸತೀಶ್ ರೆಡ್ಡಿ ಶಾಸಕ

### ಒಂಟಿ ಮನೆ ಹಕ್ಕುಪತ್ರ ವಿತರಣೆ

**ಬಡವರಿಗೆ ಬಿಬಿಎಂಪಿ ವತಿಯಿಂದ ಒಂಟಿಮನೆ ಹಕ್ಕುಪತ್ರ, ಉಚಿತ ಆರೋಗ್ಯ ಕಾರ್ಡ್, ಅಂಧ ಮಕ್ಕಳಿಗೆ ಕಂಬಳಿ, ಬಡ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ವಿತರಿಸಲಾಯಿತು. ಆರೋಗ್ಯ ಶಿಬಿರ, ಹೊಂಗಸಂದ್ರದಲ್ಲಿ ಕೊಳವೆಬಾವಿ, ಶೌಚಗೃಹ ಸೇರಿ ಹಲವು ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು.**



ಸತೀಶ್ ರೆಡ್ಡಿ ಹುಟ್ಟುಹಬ್ಬದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಚಿವ ಅಶೋಕ್, ಸಂಸದ ತೇಜಸ್ವಿ ಸೂರ್ಯ ಮತ್ತಿತರರಿದ್ದರು.

Bengaluru Edition
Dec 13, 2020 Page No. 6
Powered by : eReleGo.com

Edit with WPS Office

ವಿಶ್ವವಾಣಿ

## ಬಿಬಿಎಂಪಿಯ 30 ನೌಕರರೊಂದಿಗೆ ಕೈಜೋಡಿಸಿದ ಯೋಧರು

# ಹಲಸೂರು ಕೆರೆ ಸ್ವಚ್ಛ



ನಗರದ ಹಲಸೂರು ಕೆರೆಯನ್ನು ಬಿಬಿಎಂಪಿ ನೌಕರರು ಹಾಗೂ ಮದ್ರಾಸ್ ಎಂಜಿನಿಯರಿಂಗ್ ಗುಂಪು ಯೋಧರ ಸಹಯೋಗದೊಂದಿಗೆ ಸ್ವಚ್ಛಗೊಳಿಸಲಾಯಿತು.

ಬೆಂಗಳೂರು: ನಗರದ ವಿಶಾಲ ಕೆರೆಗಳಲ್ಲಿ ಹಲಸೂರು ಕೆರೆಯೂ ಒಂದಾಗಿದೆ. ಕೆರೆಯನ್ನು ಬಿಬಿಎಂಪಿ ನೌಕರರು ಹಾಗೂ ಮದ್ರಾಸ್ ಎಂಜಿನಿಯರಿಂಗ್ ಗ್ರೂಪ್ ಯೋಧರ ಸಹಯೋಗದೊಂದಿಗೆ ಶನಿವಾರ ಸ್ವಚ್ಛಗೊಳಿಸಲಾಯಿತು.

ಬಿಬಿಎಂಪಿಯ 30 ನೌಕರರೊಂದಿಗೆ ಕೈಜೋಡಿಸಿದ ಯೋಧರು 10 ದೋಣಿಗಳ ನೆರವಿನಿಂದ ಕೆರೆಯ ಹೂಳೆತ್ತಿದರು. ಜತೆಗೆ, ಜೆಸಿಬಿ ನೆರವಿನಿಂದ ಹೂಳು ತೆಗೆಯಲಾಯಿತು. ಕೆರೆಯ ಸುತ್ತ ಬಿದ್ದಿದ್ದ ಒಣ ಕಸವನ್ನು ಸಂಗ್ರಹಿಸಿ ತೆಗೆಯಲಾಯಿತು. ಸ್ಥಳೀಯ ಮೀನುಗಾರರಿಗೆ ಜಲಕಾಯ ಆದಾಯದ ತಾಣವಾಗಿದೆ. ಅಲ್ಲದೆ, ಸ್ಥಳೀಯರು ವಾಯುವಿಹಾರಕ್ಕೆ, ವ್ಯಾಯಾಮ ಮಾಡಲು ಕೆರೆಯ ಆವರಣವನ್ನು ಬಳಸುತ್ತಾರೆ. ಕೆರೆಯಲ್ಲಿ ಹೂಳು ತುಂಬಿದ್ದರಿಂದ ಕೆರೆ ನೀರು ಕಲುಷಿತಗೊಂಡಿತ್ತು. ಇದರಿಂದ ಕೆಟ್ಟ ವಾಸನೆ ಬರುತ್ತಿತ್ತು. ಜತೆಗೆ ರಾಜಕಾಲುವೆಯ ಕಲುಷಿತ ನೀರು ಸೇರುತ್ತಿರುವುದರಿಂದ ಕೆರೆ ಕಲುಷಿತಗೊಂಡಿದೆ.

ಕೆರೆ ನಿರ್ಮಾಣವಾದಾಗ ಅದರ ನೀರನ್ನು ಜನ ಕುಡಿಯಲು ಬಳಸುತ್ತಿದ್ದರು. ಇದನ್ನು ಮತ್ತೆ ಅದೇ ಸ್ವರೂಪಕ್ಕೆ ತರಬೇಕಿದೆ. ಜಲಮೂಲಕ್ಕೆ ಕಲುಷಿತ ನೀರು ಸೇರುವುದನ್ನು ತಡೆಯಲು ಬೇಕಿರುವ ಯೋಜನೆಯನ್ನು ರೂಪಿಸಬೇಕಿದೆ. ಮುಂದಿನ ವರ್ಷದ ವೇಳೆಗೆ ಕೆರೆ ಸುಂದರ ಮತ್ತು ಸ್ವಚ್ಛವಾಗಲಿದೆ ಎಂದು ಯೋಧರು ತಿಳಿಸಿದರು.

ಈ ವೇಳೆ ಶಾಸಕ ರಿಜ್ವಾನ್ ಹರ್ಷದ್, ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ, ಪಾಲಿಕೆ ಆಯುಕ್ತ ಮಂಜುನಾಥ ಪ್ರಸಾದ್, ಮುಖ್ಯ ಅಭಿಯಂತರ(ಕೆರೆಗಳು) ಮೋಹನ್ ಕೃಷ್ಣ, ಜಂಟಿ ಆಯುಕ್ತ(ಘನತ್ಯಾಜ್ಯ) ಸರ್ಫರಾಜ್ ಖಾನ್ ಹಾಗೂ ಇತರ ಅಧಿಕಾರಿಗಳು ಇದ್ದರು.

Edit with WPS Office

ಉದಯವಾಣಿ

ಜನಮನದ ಜೀವನಾಡಿ

# ಕಡ್ಡಾಯ ಸೋಂಕು ಪರೀಕ್ಷೆ

**ಬೆಂಗಳೂರು:** ನಗರದ ಕೈಗಾರಿಕಾ ಪ್ರದೇಶ, ಕಾರ್ಖಾನೆ, ಮಾರುಕಟ್ಟೆ ವಸತಿ ಸಮುಚ್ಚಯ, ವಿಲ್ಲಾ ಹಾಗೂ ಜನನಿಬಿಡ ಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಿಸುವವರಿಗೆ ಪ್ರತಿ 15 ದಿನಕ್ಕೊಮ್ಮೆ ಕಡ್ಡಾಯವಾಗಿ ಕೊರೊನಾ ಸೋಂಕು ಪರೀಕ್ಷೆ ನಡೆಸಲು ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ ನಿರ್ದೇಶನ ನೀಡಲಾಗಿದೆ. ಈ ಸಂಬಂಧ ಪ್ರತಿಕ್ರಿಯಿಸಿದ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್, ನಗರದಲ್ಲಿ ಸೋಂಕು ಪರೀಕ್ಷೆ ಪ್ರಮಾಣ ಉತ್ತಮವಾಗಿದೆ. ನಿತ್ಯ 32,500 ಜನರಿಗೆ ಪರೀಕ್ಷೆ ಮಾಡುವ ಗುರಿ ಇತ್ತು. ಆದರೆ, ಪಾಲಿಕೆ ನಿತ್ಯ 41 ಸಾವಿರ ಜನರನ್ನು ಪರೀಕ್ಷೆಗೆ ಒಳಪಡಿಸುತ್ತಿದೆ. ಹೀಗಾಗಿ ಕೊರೊನಾ ಸೋಂಕಿತರ ಸಂಖ್ಯೆ ಕಡಿವಾಣಕ್ಕೆ ಸಹಕಾರಿ ಎಂದರು.

ಇನ್ನು ರಾಜ್ಯದಲ್ಲಿ ಪ್ರತಿದಿನ ಒಂದು ಲಕ್ಷಕ್ಕಿಂತ ಹೆಚ್ಚು ಜನರನ್ನು ಪರೀಕ್ಷೆಗೆ ಒಳಪಡಿಸಲಾಗುತ್ತಿದ್ದು ಶೇ.90 ಅಂದರೆ 90 ಸಾವಿರ ಜನರ ಗಂಟಲು ದ್ರವ ಮಾದರಿ, ಶೇ.10ರಷ್ಟು 10 ಸಾವಿರ ಜನರನ್ನು ರ್‍ಯಾಪಿಡ್ ಆ್ಯಂಟಿಜೆನ್ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

Edit with WPS Office

ಉದಯವಾಣಿ
ಜನಮನದ ಜೀವನಾಡಿ

# ಜನಮೆಚ್ಚಿದ ನಾಯಕ ಶಾಸಕ ಸತೀಶ್‌ರೆಡ್ಡಿ: ಅಶೋಕ್

**ಬೊಮ್ಮನಹಳ್ಳಿ:** ನಾಯಕನಾಗಿ ಬೆಳೆಯುವುದು ಸುಲಭ. ಆದ್ರೆ ಜನಮೆಚ್ಚಿದ ಹಾಗೂ ಜನಪ್ರಿಯ ಜನ ನಾಯಕನಾಗಿ ಬೆಳೆಯುವುದು ಬಹಳ ವಿರಳ. ಆದರೆ, ಬೊಮ್ಮನಹಳ್ಳಿ ಶಾಸಕ ಎಂ.ಸತೀಶ್ ರೆಡ್ಡಿ ಅವರು ಜನಮೆಚ್ಚಿದ ನಾಯಕರಾಗಿದ್ದು ಇದೇ ಜನರ ಪ್ರೀತಿ, ವಿಶ್ವಾಸ, ಆಶೀರ್ವಾದ ನಿರಂತರವಾಗಿ ಇರಲಿ ಎಂದು ಕಂದಾಯ ಸಚಿವ ಆರ್. ಅಶೋಕ್ ತಿಳಿಸಿದರು.

ಬೊಮ್ಮನಹಳ್ಳಿ ಶಾಸಕ ಎಂ.ಸತೀಶ್‌ರೆಡ್ಡಿ ಅವರ 48ನೇ ಹುಟ್ಟುಹಬ್ಬದ ಅಂಗವಾಗಿ ಬೊಮ್ಮನಹಳ್ಳಿ ಕ್ಷೇತ್ರದ ವಿವಿಧ ವಾರ್ಡ್‌ಗಳ ಮಾಜಿ ಬಿಬಿಎಂಪಿ ಸದಸ್ಯರು, ಸತೀಶ್‌ರೆಡ್ಡಿ ಅಭಿಮಾನಿಗಳು ವಿವಿಧ ವಾರ್ಡ್‌ಗಳಲ್ಲಿ ಹಮ್ಮಿಕೊಂಡಿದ್ದ ವಿವಿಧ ಸಾಮಾಜಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಮಾತನಾಡಿದರು.

ಇದೇ ಬೊಮ್ಮನಹಳ್ಳಿ ಜನರ ಸಂಪೂರ್ಣ ಬೆಂಬಲದಿಂದ ಮತ್ತೆ ಮತ್ತೆ ಆಯ್ಕೆಯಾಗುತ್ತಿದ್ದಾರೆ. ಇನ್ನು ಮುಂದೆಯೂ ಹೆಚ್ಚಿನ ಸ್ಥಾನಮಾನ ಸಿಗುತ್ತದೆ ಎಂದರು.

**ಜನ್ಮದಿನ ಸೇವೆಗೆ ಸಮರ್ಪಣೆ:** ಸಂಸದ ತೇಜಸ್ವಿ ಸೂರ್ಯ ಎಚ್.ಎಸ್.ಆರ್ ಬಡಾವಣೆಯ ಬಿಬಿಎಂಪಿ ಮೈದಾನದಲ್ಲಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದ ಶಂಕುಸ್ಥಾಪನೆಗೆ ಚಾಲನೆ ನೀಡಿ ಮಾತನಾಡಿದರು.

**ಪ್ಲಾಸ್ಟಿಕ್ ಮುಕ್ತ ಕೊಡುಗೆ:** ಶಾಸಕರಾದ ಎಂ.ಸತೀಶ್ ರೆಡ್ಡಿ ಮಾತನಾಡಿ, ನಮ್ಮ ಕ್ಷೇತ್ರ ವ್ಯಾಪ್ತಿಯ ಎಚ್ ಎಸ್ ಆರ್ ಬಡಾವಣೆಯಲ್ಲಿ ಪ್ಲಾಸ್ಟಿಕ್ ಮುಕ್ತವನ್ನಾಗಿ ಮಾಡಲಾಗಿದೆ. ಮುಖ್ಯಮಂತ್ರಿಯವರು ಅವರು ನಮ್ಮ ಕ್ಷೇತ್ರದ ಅಭಿವೃದ್ಧಿಗಾಗಿ 500 ಕೋಟಿ ನೀಡಿದ್ದಾರೆ. ಇನ್ನು ಹೆಚ್ಚಿನ ಅನುದಾನ ನೀಡುವ ಭರವಸೆ ನೀಡಿದ್ದಾರೆ. ಹಾಗು ನನ್ನ ಕ್ಷೇತ್ರವನ್ನು ಅಭಿವೃದ್ಧಿಯಲ್ಲಿ ಮೊದಲ ಸ್ಥಾನ ಮಾಡಿ ತೋರಿಸುವೆ ಎಂದರು.

**ಸಿದ್ದಗಂಗಾ ಮಠದ ವಿದ್ಯಾರ್ಥಿ:** ನಾನು ತುಮಕೂರು ಸಿದ್ದಗಂಗಾ ಮಠದಲ್ಲಿ ಓದಿದ ವಿದ್ಯಾರ್ಥಿ ಆಗಿದ್ದು ಶ್ರೀಗಳ ಆಶೀರ್ವಾದ ಇದೆ. ಅವರು ಕಲಿಸಿಕೊಟ್ಟ ವಿದ್ಯೆ, ವಿನಯ, ಒಳ್ಳೆಯತನ ನನ್ನನ್ನು ಕಾಯುತ್ತಿದೆ ಎಂದರು.

**ವಿದೇಶಾಂಗದ ಪುಸ್ತಕ ಅನಾವರಣ:** ಇದೇ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಅಲ್ಪಸಂಖ್ಯಾತರ ಪ್ರಧಾನ ಕಾರ್ಯದರ್ಶಿ ಸೈಯದ್ ಸಲಾಮ್ ಮಾತನಾಡಿದರು. ಇದೇ ವೇಳೆ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ, ಬಡ ಅಂಗವಿಕಲರಿಗೆ ವೀಲ್ ಚೇರ್ ವಿತರಣೆ ಮಾಡಲಾಯಿತು.



ವಾರ್ಡ್‌-189 ಹೊಂಗಸಂದ್ರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಸತೀಶ್ ರೆಡ್ಡಿ, ಸಂಸದ ತೇಜಸ್ವಿ ಸೂರ್ಯ ಶಂಕು ಸ್ಥಾಪನೆ ನೆರವೇರಿಸಿದರು.

> ನಾನು ಯಾವತ್ತೂ ಶ್ರೀಮಂತರನ್ನು ನಂಬಿಲ್ಲ. ಬಡವರು, ದಲಿತರು, ಸಾಮಾನ್ಯ ವರ್ಗದ ಜನ ನಿರಂತರವಾಗಿ ನಮ್ಮ ಕಷ್ಟ ಸುಖದಲ್ಲಿ ಹಗಲು ರಾತ್ರಿ ಇದ್ದು ಗೆಲ್ಲಿಸುತ್ತಾರೆ. ನಿಜವಾಗಿಯೂ ಬಡವರ ಪ್ರೀತಿ, ಸ್ನೇಹ, ವಿಶ್ವಾಸವೇ ನನಗೆ ಶ್ರೀರಕ್ಷೆ. ಅವರ ಸೇವೆಗಾಗಿ ನನ್ನ ಜೀವ-ಜೀವನ ಮೀಸಲು ಇಡುತ್ತೇನೆ.
>
> ▪ ಎಂ.ಸತೀಶ್‌ರೆಡ್ಡಿ, ಶಾಸಕ

ರಾಜ್ಯ ಸಭಾ ಸದಸ್ಯರಾದ ಶ್ರೀ ಕೆ.ಹೆಚ್.ರಾಜೇಂದ್ರರೆಡ್ಡಿ, ಬೊಮ್ಮನಹಳ್ಳಿ ಬಿಜೆಪಿ ಮಂಡಲ ಅಧ್ಯಕ್ಷ ಶ್ರೀನಿವಾಸರೆಡ್ಡಿ, ಮಂಗಳಮ್ಮ, ಶ್ರೀನಿವಾಸ್, ನಾಗೇಂದ್ರ, ಅತ್ತಿಬೆಲೆ ಮಂಡಲ ಅಧ್ಯಕ್ಷ ಎನ್.ಆರ್.ಟಿ. ಅಶೋಕ್‌ರೆಡ್ಡಿ, ಸಿಂಗಸಂದ್ರ ವಾರ್ಡ್‌ನ ಬಿಬಿಎಂಪಿ ಮಾಜಿ ಸದಸ್ಯ ಶ್ರೀನಿವಾಸರೆಡ್ಡಿ, ಬಿಜೆಪಿ ರಾಜ್ಯ ಅಲ್ಪಸಂಖ್ಯಾತರ ಪ್ರಧಾನ ಕಾರ್ಯದರ್ಶಿ ಸೈಯದ್ ಸಲಾಂ, ಕೊತ್ತನೂರು ಗೇಟ್ ಚಂದ್ರರೆಡ್ಡಿ, ಬಿಬಿಎಂಪಿ ಕ್ಷೇತ್ರದ ಬಿಜೆಪಿ ಅಧ್ಯಕ್ಷ ರಾಜೇಂದ್ರರೆಡ್ಡಿ, ಸ್ಥಳೀಯ ಮಾಜಿ ಕಾರ್ಪೊರೇಟರ್ ಗುರುಮೂರ್ತಿರೆಡ್ಡಿ, ಸ್ಥಳೀಯ ಮುಖಂಡರು, ಕಾರ್ಯಕರ್ತರು ಇದ್ದರು.

Edit with WPS Office

ಸಂಯುಕ್ತ ಕರ್ನಾಟಕ

# ಎಸಿಬಿ ಬಲೆಗೆ ಆರೋಗ್ಯಾಧಿಕಾರಿ

ಬೆಂಗಳೂರು: ನೈಸರ್ಗಿಕ ಆಹಾರ ಉತ್ಪನ್ನ ತಯಾರಿಕೆಗಾಗಿ ಎಣ್ಣೆ ಗಿರಣಿ ಆರಂಭಿಸಲು ಅನುಮತಿ ನೀಡಲು ಲಂಚ ಪಡೆಯುತ್ತಿದ್ದ ಬಿಬಿಎಂಪಿ ಹಿರಿಯ ಆರೋಗ್ಯ ಅಧಿಕಾರಿ ಎಸಿಬಿ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಟಿ. ದಾಸರಹಳ್ಳಿ ವಲಯದ ಆರೋಗ್ಯ ಅಧಿಕಾರಿ ವಿ.ಆರ್. ಪ್ರವೀಣ್‌ಕುಮಾರ್ ಅವರನ್ನು ಬಂಧಿಸಿರುವ ಎಸಿಬಿ ಅಧಿಕಾರಿಗಳು, ಲಂಚವಾಗಿ ಪಡೆದ ₹7 ಸಾವಿರ ವಶಕ್ಕೆ ಪಡೆದಿದ್ದಾರೆ.

Edit with WPS Office

ಸಂಯುಕ್ತ ಕರ್ನಾಟಕ

# ಯಲಹಂಕ: ಸಮುದಾಯ ಭವನ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಕೋಗಿಲು ಸಮೀಪದ ಶ್ರೀನಿವಾಸಪುರದಲ್ಲಿ ಮುಖ್ಯಮಂತ್ರಿಗಳ ನವನಗರೋತ್ಥಾನ ಯೋಜನೆಯಡಿಯಲ್ಲಿ ನಿರ್ಮಿಸಿರುವ ನೂತನ ಸಮುದಾಯಭವನ ಸೇರಿದಂತೆ ₹2.40 ಕೋಟಿ ವೆಚ್ಚದಲ್ಲಿ ಕೈಗೊಂಡಿದ್ದ ವಿವಿಧ ಮೂಲಸೌಕರ್ಯಗಳನ್ನು ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ಶನಿವಾರ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, 'ಸ್ಥಳೀಯರ ಬೇಡಿಕೆಯಂತೆ ಸುಸಜ್ಜಿತವಾದ ಭವನ ನಿರ್ಮಿಸಲಾಗಿದೆ. ಬಡ ಜನರು ಕಡಿಮೆ ಖರ್ಚಿನಲ್ಲಿ ಕಾರ್ಯಕ್ರಮಗಳನ್ನು ನಡೆಸಲು ಅನುಕೂಲವಾಗಲಿದೆ' ಎಂದರು.



ಸಮುದಾಯ ಭವನವನ್ನು ಬಿಡಿಎ ಅಧ್ಯಕ್ಷ ಎಸ್‌ಆರ್‌ವಿಶ್ವನಾಥ್ ಉದ್ಘಾಟಿಸಿದರು. ಕೆ.ಎ.ಮುನೀಂದ್ರಕುಮಾರ್ ಇದ್ದರು

'ಶುದ್ಧ ಕುಡಿಯುವ ನೀರಿನ ಘಟಕ, ಬಸ್ ತಂಗುದಾಣ, ಅಂಗನವಾಡಿ ಹಾಗೂ ರಸ್ತೆಗಳ ಅಭಿವೃದ್ಧಿಗೆ ಸಾರ್ವಜನಿಕರು ಮನವಿ ಮಾಡಿದ್ದಾರೆ. ಇವುಗಳಿಗೂ ಶೀಘ್ರದಲ್ಲೇ ಅನುದಾನ ಮಂಜೂರು ಮಾಡಿಸಲಾಗುವುದು' ಎಂದು ಭರವಸೆ ನೀಡಿದರು.

'ಕ್ಷೇತ್ರದ ವಸತಿ ವಂಚಿತರಿಗೆ ಸೂರು ಕಲ್ಪಿಸಲು 10 ಸಾವಿರ ಮನೆಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಬಹುಮಹಡಿ ಕಟ್ಟಡಗಳ ಕಾಮಗಾರಿ ಕೆಲವೆಡೆ ನಡೆಯುತ್ತಿದೆ. ಇನ್ನು ಕೆಲವು ಕಡೆ ಪ್ರಾರಂಭಿಸಬೇಕಿದೆ. ಪ್ರತಿ ಮನೆಗೆ ₹20 ಲಕ್ಷ ವೆಚ್ಚ ಆಗಲಿದೆ' ಎಂದರು.

ಸ್ಥಳೀಯ ಮುಖಂಡ ಕೆ.ಎ.ಮುನೀಂದ್ರಕುಮಾರ್, 'ಕೊಳಚೆ ನಿರ್ಮೂಲನಾ ಮಂಡಳಿಯಿಂದ ಈಗಾಗಲೇ ಕೋಗಿಲು ಬಡಾವಣೆ, ಅಗ್ರಹಾರ ಬಡಾವಣೆ ಹಾಗೂ ಕಟ್ಟಿಗೇನಹಳ್ಳಿಗಳಲ್ಲಿ ಬಡವರಿಗೆ ಮನೆಗಳ ನಿರ್ಮಾಣ ಕಾಮಗಾರಿ ಆರಂಭವಾಗಿದೆ. ಶ್ರೀನಿವಾಸಪುರದಲ್ಲಿ ಕೆಲ ಸಮಸ್ಯೆಯಿಂದ ಕಾಮಗಾರಿ ಸ್ಥಗಿತಗೊಂಡಿತ್ತು, ಈಗ ಆ ಕಾರ್ಯಕ್ಕೆ ಚಾಲನೆ ದೊರೆತಿದ್ದು, ಶೀಘ್ರದಲ್ಲೇ 42 ಮನೆ ನಿರ್ಮಾಣಗೊಳ್ಳಲಿವೆ' ಎಂದರು.

Edit with WPS Office

# ಕಡಲೆಕಾಯಿ ಪರಿಷೆ ಸರಳ, ಸಾಂಪ್ರದಾಯಿಕ ಆಚರಣೆಗೆ ಸೀಮಿತ

▪ ಮಂಜುನಾಥ್ ಗಂಗಾವತಿ

ಬೆಂಗಳೂರು: [illegible]



## ಸರಳ ಆಚರಣೆ ಹೇಗೆ ?

[illegible]



ಈ ಬಾರಿಯ ಪರಿಷೆಯನ್ನು ಸರಳವಾಗಿ ಆಚರಿಸಲಾಗುತ್ತದೆ. ದೇವಸ್ಥಾನದಲ್ಲಿ ವಿಶೇಷ ಪೂಜೆ, ಕಡಲೆಕಾಯಿ ಅಭಿಷೇಕ ನಡೆಯುತ್ತದೆ. ದರ್ಶನಕ್ಕೆ ಅವಕಾಶ ನೀಡಲಾಗಿದ್ದು, ಪ್ರಸಾದ ವಿತರಿಸುವುದಿಲ್ಲ. ಪ್ರತಿವರ್ಷದಂತೆ ಸಾಂಪ್ರದಾಯಿಕವಾಗಿ ಪರಿಷೆ ನಡೆಯಲಿದೆ.
■ ಕೆ.ದಯಾನಂದ, ಧರ್ಮಾದಾಯ ದತ್ತಿ ಇಲಾಖೆಯ ಆಯುಕ್ತ.

ಕೊರೋನಾ ಹಿನ್ನೆಲೆ ಬಿಬಿಎಂಪಿ , ಮುಜರಾಯಿ ಇಲಾಖೆಯು ಕಡಲೆಕಾಯಿ ಪರಿಷೆಯನ್ನು ಸರಳವಾಗಿ ಆಚರಿಸಲು [illegible]. ಕೆಂಪೇಗೌಡರ ಕಾಲದಿಂದಲೂ ಪರಿಷೆ ನಡೆಯುತ್ತಿತ್ತು. ಇದೇ ಮೊದಲ ಬಾರಿಗೆ ಪರಿಷೆ ಪೂಜೆಗೆ ಮಾತ್ರ ಸೀಮಿತವಾಗಿದೆ.
■ ಕಟ್ಟೆ ಸತ್ಯನಾರಾಯಣ, ಪಾಲಿಕೆ ಸದಸ್ಯ.

**ಕಡಲೆಕಾಯಿ ಪರಿಷೆ ಆಚರಣೆಗೆ ಮುಜರಾಯಿ ಇಲಾಖೆ ಸಿದ್ಧತೆ**

ಗಣಪತಿ, ನಂದಿ ಅಭಿಷೇಕಕ್ಕೆ 1 ಮೂಟೆ ಕಡಲೆಕಾಯಿ ಖರೀದಿ

**ಈ ಬಾರಿ ರಸ್ತೆ ಇಕ್ಕೆಲಗಳಲ್ಲಿ ವ್ಯಾಪಾರಕ್ಕೆ ಅವಕಾಶವಿಲ್ಲ**

ಕಡಲೆಕಾಯಿಯನ್ನು ಪ್ರಸಾದವಾಗಿ ವಿತರಣೆ ಮಾಡುವುದಿಲ್ಲ

Edit with WPS Office

ಜನದನಿಯ ಸಾರಥಿ
ವಾರ್ತಾ ಭಾರತಿ

ವಾರ್ತಾ ಭಾರತಿ

# ಕಾಮಗಾರಿ ಗುತ್ತಿಗೆಯಲ್ಲಿ ಗೋಲ್‌ಮಾಲ್: ದೂರು

ಬೆಂಗಳೂರು, ಡಿ.12: ಮಹದೇವಪುರ ಬಿಬಿಎಂಪಿ ಕಚೇರಿಯಲ್ಲಿ ಇಂಜಿನಿಯರ್‌ಗಳು ಅಭಿವೃದ್ಧಿ ಕಾಮಗಾರಿ ಗುತ್ತಿಗೆಯಲ್ಲಿ ಗೋಲ್‌ಮಾಲ್ ಮಾಡುತ್ತಿದ್ದಾರೆ ಎಂದು ಆರೋಪಿಸಿ ಪ್ರತಿಭಟನೆ ನಡೆಸಿದ ಗುತ್ತಿಗೆದಾರರು ಜಂಟಿ ಆಯುಕ್ತರಿಗೆ ದೂರು ಸಲ್ಲಿಸಿದ್ದಾರೆ.

ಬಿಬಿಎಂಪಿ ಕಚೇರಿಗೆ 14ನೇ ಫೈನಾನ್ಸ್, ಲೋಕೋಪಯೋಗಿ ಅನುದಾನ, ಮೇಯರ್ ವಿಶೇಷ ಅನುದಾನ, ಶಾಸಕರ ಅನುದಾನ ಸೇರಿದಂತೆ ಸರಕಾರದಿಂದ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಹರಿದುಬರುತ್ತದೆ. ಎಕ್ಸಿಕ್ಯುಟಿವ್ ಇಂಜಿನಿಯರ್ ಮುನಿರೆಡ್ಡಿ ಪ್ಯಾಕೇಜ್ ಮಾಡಿ ಅವರಿಗೆ ಬೇಕಾದಂತಹ ಗುತ್ತಿಗೆದಾರರಿಗೆ, ಅವರ ಸಂಬಂಧಿಕರಿಗೆ ಶೇಕಡಾ 12ರಷ್ಟು ಕಮಿಷನ್ ಪಡೆದು ನೀಡುತ್ತಿದ್ದಾರೆ ಎಂದು ಗುತ್ತಿಗೆದಾರ ಪ್ರಕಾಶ್ ರೆಡ್ಡಿ ದೂರಿದರು.

ಸ್ಥಳೀಯ ವೃತ್ತಿಪರ ಗುತ್ತಿಗೆದಾರರು 30 ವರ್ಷಗಳಿಂದ ಕೆಲಸ ಮಾಡುತ್ತಿದ್ದರೂ ಅವರನ್ನು ಬೀದಿ ಪಾಲು ಮಾಡುತ್ತಿದ್ದಾರೆ. ಟೆಂಡರ್‌ನಲ್ಲಿ ಬಹಳಷ್ಟು ಅವ್ಯವಹಾರಗಳು ನಡೆಯುತ್ತಿವೆ. ಈ ಹಿಂದೆ ನಡೆದಂತಹ 5 ಕೋಟಿ ರೂ. ಟೆಂಡರ್‌ನಲ್ಲಿ ಭಾಗವಹಿಸಿದವರಿಗೆ ಗುತ್ತಿಗೆ ನೀಡದೆ ವಂಚನೆ ಮಾಡಿದ್ದಾರೆ ಎಂದು ಆರೋಪಿಸಿದರು.

ಶುಕ್ರವಾರ ಟೆಂಡರ್ ಓಪನ್ ಮಾಡಬೇಕಿತ್ತು. ಆದರೆ, ಓಪನ್ ಮಾಡಲು ಅಧಿಕಾರಿಗಳು ಕಚೇರಿಗೆ ಬರಲಿಲ್ಲ. ಟೆಂಡರ್‌ನಲ್ಲಿ ಭಾಗವಹಿಸಿದಂತಹ ಗುತ್ತಿಗೆದಾರರು ಬ್ಯಾಂಕ್‌ನಿಂದ ಎಫ್‌ಡಿಆರ್ ಪಡೆದು ಸಂಬಂಧಪಟ್ಟ ಅಧಿಕಾರಿಗಳಿಗೆ ಇಂದು ನೀಡಬೇಕಾಗಿತ್ತು. ಆದರೆ ಎಫ್‌ಡಿಆರ್ ಪಡೆಯದೇ ಅಧಿಕಾರಿಗಳು ಗುತ್ತಿಗೆದಾರರನ್ನು ಡಿಸ್‌ಕ್ವಾಲಿಫೈ ಮಾಡುತ್ತಿದ್ದಾರೆ ಎಂದು ದೂರಿದರು. ಇದೇ ರೀತಿ ಮುಂದುವರಿದರೆ ಮುಂದಿನ ದಿನಗಳಲ್ಲಿ ದೊಡ್ಡ ಮಟ್ಟದಲ್ಲಿ ಹೋರಾಟ ಮಾಡುವುದಾಗಿ ಎಂದು ಎಚ್ಚರಿಸಿದರು.

Bengaluru Edition
Dec 13, 2020 Page No.2

Edit with WPS Office

ಸಂಜೆವಾಣಿ

contact@sanjevani.com

# ಪಾಲಿಕೆ ನೌಕರರಿಂದ ಹಲಸೂರು ಕೆರೆ ಸ್ವಚ್ಛ

ಬೆಂಗಳೂರು, ಡಿ.12–ನಗರದ ವಿಶಾಲ ಕೆರೆಗಳಲ್ಲಿ ಂದಾದ ಹಲಸೂರು ಕೆರೆಯನ್ನು ಬಿಬಿಎಂಪಿ ನೌಕರರು ಗೂ ಮದ್ರಾಸ್ ಇಂಜಿನಿಯರಿಂಗ್ ಗ್ರೂಪ್ ಯೋಧರ ಹಯೋಗದೊಂದಿಗೆ ಸ್ವಚ್ಛಗೊಳಿಸಲಾಯಿತು.

ನಗರದಲ್ಲಿಂದು ಬಿಬಿಎಂಪಿಯ 30 ನೌಕರರೊಂದಿಗೆ ಜೋಡಿಸಿದ ಯೋಧರು 10 ಬೋಟ್‌ಗಳ ನೆರವಿನಿಂದ ರೆಯ ಹೂಳೆತ್ತಿದರು. ಅಲ್ಲದೆ, ಜೆಸಿಬಿ ನೆರವಿನಿಂದಲೂ ಳು ಎತ್ತಲಾಯಿತು. ಕೆರೆಯ ಸುತ್ತ ಬಿದ್ದಿದ್ದ ಒಣ ಸವನ್ನೂ ಎತ್ತಲಾಯಿತು.

ಸ್ಥಳೀಯ ಮೀನುಗಾರರಿಗೆ ಜಲಕಾಯವು ಆದಾಯದ ಲವಾಗಿದೆ. ಅಲ್ಲದೆ, ಸ್ಥಳೀಯರು ವಾಯುವಿಹಾರಕ್ಕೆ, ಯಾಮ ಮಾಡಲು ಕೆರೆಯ ಆವರಣವನ್ನು ಬಳಸುತ್ತಾರೆ. ರೆಯಲ್ಲಿ ಹೂಳು ತುಂಬಿದ್ದರಿಂದ ವಾತಾವರಣವು ಷಿತಗೊಂಡಿದೆ. ರಾಜಕಾಲುವೆಯ ಕಲುಷಿತ ನೀರು ರುತ್ತಿರುವುದರಿಂದ ಕೆರೆ ಕಲುಷಿತಗೊಂಡಿದೆ.

ಕೆರೆ ನಿರ್ಮಾಣವಾದಾಗ ಅದರ ನೀರನ್ನು ಜನ ಡಿಯಲು ಬಳಸುತ್ತಿದ್ದರು. ಇದನ್ನು ಮತ್ತೆ ಅದೇ ರೂಪಕ್ಕೆ ತರಬೇಕಿದೆ. ಜಲಮೂಲಕ್ಕೆ ಕಲುಷಿತ ನೀರು ರುವುದನ್ನು ತಡೆಯಲು ಬೇಕಿರುವ ಯೋಜನೆಯನ್ನು ರೂಪಿಸಿಕೊಂಡಿದ್ದೇವೆ. ಮುಂದಿನ ವರ್ಷದ ವೇಳೆಗೆ ಕೆರೆ ಸುಂದರ ಮತ್ತು ಸ್ವಚ್ಛವಾಗಲಿದೆ ಎಂದು ಯೋಧರು ಹೇಳಿದರು.



ಈ ಸಂದರ್ಭದಲ್ಲಿ ಶಾಸಕ ರಿಜ್ವಾನ್ ಹರ್ಷದ್, ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ, ಪಾಲಿಕೆ ಆಯುಕ್ತ ಮಂಜುನಾಥ ಪ್ರಸಾದ್, ಮುಖ್ಯ ಅಭಿಯಂತರ(ಕೆರೆಗಳು) ಮೋಹನ್ ಕೃಷ್ಣಾ, ಜಂಟಿ ಆಯುಕ್ತ(ಘನತ್ಯಾಜ್ಯ) ಸರ್ಫರಾಜ್ ಖಾನ್ ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

Edit with WPS Office

ಸಂಜೆ ವಾಣಿ
1992

# ವಸತಿ ವಂಚಿತರಿಗೆ 10 ಸಾವಿರ ಮನೆ ನಿರ್ಮಾಣ



ಬೆಂಗಳೂರು: ಡಿ. 12– ವಸತಿ ವಂಚಿತರಿಗೆ ಸರ್ವರಿಗೂ ಸೂರು ಯೋಜನೆಯಡಿಯಲ್ಲಿ 10ಸಾವಿರ ಮನೆ ನೀಡಲಾಗುವುದೆಂದು ಬಿಡಿಎ ಅಧ್ಯಕ್ಷ, ಶಾಸಕ ಎಸ್.ಆರ್.ವಿಶ್ವನಾಥ್ ಇಂದಿಲ್ಲಿ ತಿಳಿಸಿದ್ದಾರೆ. ಯಲಹಂಕ ಬಳಿಯ ಶ್ರೀನಿವಾಸಪುರದಲ್ಲಿ ಮುಖ್ಯಮಂತ್ರಿ ನಗರೋತ್ಥಾನ ಅಡಿಯಲ್ಲಿ ನೂತನವಾಗಿ ನಿರ್ಮಿಸಿರುವ ಸಮುದಾಯಭವನವನ್ನು ಲೋಕಾರ್ಪಣೆಗೊಳಿಸಿ ನಂತರ ಮಾತನಾಡಿದ ಅವರು, ನಮ್ಮ ಕ್ಷೇತ್ರಾದ್ಯಂತ ವಸತಿವಂಚಿತರಿದ್ದಾರೆ. ವಸತಿವಂಚಿತರಿಗೆ ಸೂರು ಕಲ್ಪಿಸುವ ನಿಟ್ಟಿನಲ್ಲಿ 10ಸಾವಿರ ಮನೆಗಳುಳ್ಳ ಅಪಾರ್ಟ್‌ಮೆಂಟ್ ನಿರ್ಮಿಸಲಾಗುವುದು. ಪ್ರತಿ ಮನೆಗೆ 15ರಿಂದ 20ಲಕ್ಷ ವೆಚ್ಚವಾಗುತ್ತದೆ. 6ತಿಂಗಳೊಳಗೆ ಕಾಮಗಾರಿ ಆರಂಭಿಸಲಾಗುವುದು ಎಂದರು.

ಇನ್ನು, ಶ್ರೀನಿವಾಸಪುರದಲ್ಲಿ ಮೂಲಭೂತ ಸೌಕರ್ಯಗಳು ಸೇರಿ, ಸಮುದಾಯ ಭವನ ಕಟ್ಟಬೇಕೆಂದು ಇಲ್ಲಿನ ಸ್ಥಳೀಯರ ಒತ್ತಾಸೆಯಾಗಿತ್ತು. ಅದರಂತೆ ಸುಮಾರು 2.40ಲಕ್ಷ ರೂ. ಅಂದಾಜುವೆಚ್ಚದಲ್ಲಿ ವಿವಿಧ ಕಾಮಗಾರಿ ಕೈಗೊಂಡು ರಸ್ತೆ, ಒಳಚರಂಡಿ ಸೇರಿದಂತೆ ಸುಸಜ್ಜಿತವಾದ ಸಮುದಾಯ ಭವನ ನಿರ್ಮಿಸಲಾಗಿದೆ. ಮದುವೆ, ನಾಮಕರಣದಂತಹ ಕಾರ್ಯಕ್ರಮ ನಡೆಸಲು ಅನುಕೂಲಿದೆ. ಸರ್ಕಾರದ ಸ್ವತ್ತು ಎಂದು ತಾತ್ಸಾರ ಮಾಡಬಾರದು. ಇದು ತಮ್ಮ ಇದರ ಸದುಪಯೋಗ ಮಾಡಿಕೊಳ್ಳಬೇಕು ಎಂದು ಹೇಳಿದರು.

ಇದೇ ವೇಳೆ ಸ್ಥಳೀಯ ನಿವಾಸಿಗಳು ಬಸ್ ನಿಲ್ದಾಣ, ಕುಡಿಯುವ ನೀರಿನ ಘಟಕಕ್ಕೆ, ಕೆಲ ರಸ್ತೆಗಳ ನಿರ್ಮಾಣಕ್ಕೆ ಮನವಿ ಸಲ್ಲಿಸಿದರು. ಶಾಸಕರು ಶೀಘ್ರದಲ್ಲೇ ಮಾಡುವುದಾಗಿ ಭರವಸೆ ನೀಡಿದರು.

ಪಾಲಿಕೆ ಮಾಜಿ ಸದಸ್ಯ ಮುನೀಂದ್ರಕುಮಾರ್ ಮಾತನಾಡಿ, ಈಗಾಗಲೇ ಸಾಕಷ್ಟು ಅಭಿವೃದ್ಧಿ ಕಾಮಗಾರಿ ಆಗಿದೆ. ಬಾಕಿ ಇರುವ ಕಾಮಗಾರಿ ಶೀಘ್ರದಲ್ಲೇ ಆರಂಭಿಸಲು ಸರ್ಕಾರಕ್ಕೆ ಮನವಿ ಮಾಡಲಾಗುವುದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಬಿಬಿಎಂಪಿ ಎಇಇ ಸುಧಾಕರ್ ರೆಡ್ಡಿ, ಗುತ್ತಿಗೆದಾರ ಬಿ.ಜಿ.ಚಂದ್ರಶೇಖರ ಸೇರಿದಂತೆ ಇನ್ನಿತರರಿದ್ದರು.

Edit with WPS Office

ಸಂಜೆವಾಣಿ

# ಟೆಂಡರ್ ನಲ್ಲಿ ಗೋಲ್ ಮಾಲ್ - ಗುತ್ತಿಗೆದಾರರ ಪ್ರತಿಭಟನೆ



ಟೆಂಡರ್ ನಲ್ಲಿ ಗೋಲ್ ಮಾಲ್ ಮಾಡಲಾಗುತ್ತಿದೆ ಎಂದು ಆರೋಪಿಸಿ ಮಹದೇವಪುರ ಬಿಬಿಎಂಪಿ ಕಚೇರಿಯ ಕಾರ್ಯಪಾಲಕ ಅಭಿಯಂತರ ಕಚೇರಿ ಮುಂದೆ ಗುತ್ತಿಗೆದಾರರಿಂದ ಪ್ರತಿಭಟನೆ.

ಮಹದೇವಪುರ,ಡಿ.12: ಮಹದೇವಪುರ ಬಿಬಿಎಂಪಿ ಕಚೇರಿಯಲ್ಲಿ ಇಂಜಿನಿಯರ್ ಗಳು ಅಭಿವೃದ್ಧಿ ಕಾಮಗಾರಿ ಗುತ್ತಿಗೆಯಲ್ಲಿ ಗೋಲ್ ಮಾಲ್ ಮಾಡುತ್ತಿದ್ದಾರೆ ಎಂದು ಜಂಟಿ ಆಯುಕ್ತರಿಗೆ ಗುತ್ತಿಗೆ ದಾರರು ದೂರು ನೀಡಿದ್ದಾರೆ.

ಬಿಬಿಎಂಪಿ ಕಛೇರಿಗೆ 14ನೇ ಫೈನಾನ್ಸ್ ,ಲೋಕೋಪಯೋಗಿ ಅನುದಾನ ,ಮೇಯರ್ ವಿಶೇಷ ಅನುದಾನ ಶಾಸಕರ ಅನುದಾನ ಸೇರಿದಂತೆ ಸರ್ಕಾರದಿಂದ ಅಭಿವೃದ್ಧಿ ಕಾಮಗಾರಿಗಳಿಗೆ ಬರುವಂತಹ ಅನುದಾನದಲ್ಲಿ ಎಕ್ಸ್ಕ್ಯೂಟಿವ್ ಇಂಜಿನಿಯರ್ ಮುನಿರೆಡ್ಡಿ ಪ್ಯಾಕೇಜ್ ಮಾಡಿ ಅವರಿಗೆ ಬೇಕಾದಂತಹ ಗುತ್ತಿಗೆದಾರರಿಗೆ ಅಥವಾ ಅವರ ಸಂಬಂಧಿಕರಿಗೆ ಶೇಕಡಾ 12% ರಷ್ಟು ಹಣವನ್ನು ಪಡೆದು ಅವರಿಗೆ ನೀಡುತ್ತಿದ್ದಾರೆ ಗುತ್ತಿಗೆದಾರ ಪ್ರಕಾಶ್ ರೆಡ್ಡಿ ದೂರಿದರು.ಸ್ಥಳೀಯ ವ್ಯಕ್ತಿಪರ ಗುತ್ತಿಗೆದಾರರು 30 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ ಅಂತಹ ಅವರನ್ನು ಬೀದಿ ಪಾಲು ಮಾಡುತ್ತಿದ್ದಾರೆ.

ಟೆಂಡರ್ ನಲ್ಲಿ ಬಹಳಷ್ಟು ಅವ್ಯವಹಾರಗಳು ನಡೆಯುತ್ತಿವೆ.

ಈ ಹಿಂದೆ ನಡೆದಂತಹ 5 ಕೋಟಿ ಟೆಂಡರ್ ನಲ್ಲಿ ಭಾಗವಹಿಸಿದವರಿಗೆ ಗುತ್ತಿಗೆ ನೀಡದೆ ವಂಚನೆ ಮಾಡಿದ್ದಾರೆ. ಶುಕ್ರವಾರ ಟೆಂಡರ್ ಓಪನ್ ಮಾಡಬೇಕಿತ್ತು ಆದರೂ ಸಹ ಓಪನ್ ಮಾಡಲು ಕಚೇರಿಗೆ ಬರದ ಅಧಿಕಾರಿಗಳು ಟೆಂಡರ್ ನಲ್ಲಿ ಭಾಗವಹಿಸಿ ದಂತಹ ಗುತ್ತಿಗೆದಾರರು ಬ್ಯಾಂಕ್ ನಿಂದ ಎಫ್ ಡಿ ಆರ್ ಪಡೆದು ಸಂಬಂಧ ಪಟ್ಟ ಅಧಿಕಾರಿಗಳಿಗೆ ಇಂದು ನೀಡಬೇಕಾಗಿತ್ತು ಆದರೆ ಎಫ್ ಡಿಆರ್ ಪಡೆಯದೇ ಅಧಿಕಾರಿಗಳು ಗುತ್ತಿಗೆದಾರರನ್ನು ಡಿಸ್ ಕ್ವಾಲಿಫೈ ಮಾಡುತ್ತಿದ್ದಾರೆ ಎಂದು ದೂರಿದರು.ಇದೇ ರೀತಿ ಮುಂದುವರೆದರೆ ಮುಂದಿನ ದಿನಗಳಲ್ಲಿ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದರು.

Edit with WPS Office